(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಈಗ ಚರ್ಚೆ.. ಮಾನ್ಯ ವಿರೋಧ ಪಕ್ಷದ ನಾಯಕರು..

ಶ್ರೀ ಬಿ.ಎಸ್.ಯಡಿಯೂರಪ್ಪ: (ವಿರೋಧ ಪಕ್ಷದ ನಾಯಕರು):ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ಶ್ರೀ ಸಿ.ಎಂ. ಉದಾಸಿಯವರು ಮಾತನಾಡುತ್ತಾರೆ.

ಶ್ರೀ ಸಿ.ಎಂ.ಉದಾಸಿ(ಹಾನಗಲ್): ಮಾನ್ಯ ಅಧ್ಯಕ್ಷರೆ, ಸಹಕಾರಿ ರಂಗದಲ್ಲಿ...

9.ಅಧ್ಯಕ್ಷರ ಅಪ್ಪಣೆಯ ಮೇರೆಗೆ.

ವಿಷಯ: ಗಮನ ಸೆಳೆಯುವ ಸೂಚನೆಗಳ ಬಗ್ಗೆ.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಕಾಲ್ ಅಟೆನ್‌ಷನ್ ಇದೆ. ಮಾನ್ಯ ಲೋಕೋಪಯೋಗಿ ಸಚಿವರನ್ನು ಕರೆಸಬೇಕು.

ಅಧ್ಯಕ್ಷರು: ನಿಮ್ಮ ಕಾಲ್ ಅಟೆನ್‌ಷನ್ ಇದೆ. ಪಿಡಬ್ಲ್ಯುಡಿ ಮಿನಿಸ್ಟರ್ ಅವರಿಂದ ಉತ್ತರ ಬೇಕು ಎಂದು ಮನವಿ ಕೊಟ್ಟಿದ್ದೀರಿ. ಅವರನ್ನು ಕರೆಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್: ಸಾರ್ ಬರುವುದೇ ಇಲ್ಲ. ಏಳು ದಿವಸದಿಂದ ಕಾರ್ಯಕ್ರಮದ ಪಟ್ಟಿಯಲ್ಲಿ ಬರುತ್ತಿದೆ ಸಾರ್.

ಅಧ್ಯಕ್ಷರು: ಅವರನ್ನು ಕರೆಸುತ್ತೇನೆ. ಕರೆಸಿದಾಗ ನಿಮಗೆ ಅವಕಾಶ ಕೊಡುತ್ತೇನೆ.

10. ವಿತ್ತೀಯ ಕಾರ್ಯಕಲಾಪಗಳು.

2005–06 ನೇ ಸಾಲಿನ ಆಯವ್ಯಯ ಬೇಡಿಕೆಗಳ ಮೇಲಿನ ಚರ್ಚೆ:

ಶ್ರೀ ಸಿ.ಎಂ.ಉದಾಸಿ(ಹಾನಗಲ್):–ಮಾನ್ಯ ಅಧ್ಯಕ್ಷರೆ, ಸಹಕಾರಿ ರಂಗಕ್ಕೆ ಶತಮಾನದ ಸಂಭ್ರಮ ಇರಬೇಕಾದಂತಹ ಸಂದರ್ಭದಲ್ಲಿ ಇವತ್ತು ಸಹಕಾರಿ ಇಲಾಖೆಯಿಂದ ಕರ್ನಾಟಕದ ಜನ ಏನು ನಿರೀಕ್ಷೆ ಮಾಡಿದ್ದರು, ಅದು ಸಾಧ್ಯವಾಗಿದೆಯೇ ಎಂಬ ಪ್ರಶ್ನೆ ನಮ್ಮೆಲ್ಲರ ಎದುರುಗಡೆ ಬರುತ್ತಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಸಹಕಾರಿ ರಂಗದಲ್ಲಿ ಇವತ್ತು ಇಡೀ ರಾಜ್ಯದಾದ್ಯಂತ ಪ್ರತಿ ಒಂದು ಗ್ರಾಮೀಣ ಭಾಗದ ಜನತೆಯೂ ಸಹಿತ ಸಹಕಾರಿ ರಂಗದಲ್ಲಿ ತೊಡಗಿರುವುದರಿಂದ ಅವರ ಸಮಸ್ಯೆಗಳಿಗೆ ಸ್ಪಂದನೆ

ಮಾಡಬೇಕಾದಂತಹ ವಿಚಾರಗಳಲ್ಲಿ ಅನೇಕ ಸಹಕಾರಿ ಸಂಘಗಳನ್ನು ಮಾಡಿದ್ದು ಇದೆ. ರಾಜ್ಯದಲ್ಲಿ ಇವತ್ತು 32,764 ಸಹಕಾರಿ ಸಂಘಗಳು ಇದ್ದಾವೆ. 32,764 ಸಹಕಾರಿ ಸಂಘಗಳು ಇದ್ದರೆ ಕೇವಲ 27,382 ಸಂಘಗಳು ಇವತ್ತು ಕಾರ್ಯ ನಿರ್ವಹಣೆ ಮಾಡುತ್ತಿದೆ. ಕಾರ್ಯ ನಿರ್ವಹಣೆ ಮಾಡುತ್ತಿದ್ದರೂ ಸಹಿತ 2577 ಸಂಘಗಳು ನಿಷ್ಕ್ರೀಯೆಗೊಂಡಿದ್ದಾವೆ. ಹಾಗೂ 2705 ಸಮಾಪನ ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಇದೇನು ತೋರಿಸುತ್ತದೆ ಎಂದರೆ ಒಂದು ಪತ್ರಿಕೆಯಲ್ಲಿ ವರದಿ ಬಂದಿರುವಂತಹದನ್ನು ನೋಡಿಕೊಂಡು ಹೋಗಿದ್ದಾರೆ ಸುಮಾರು 13 ಸಾವಿರಕ್ಕಿಂತ ಹೆಚ್ಚು ಸಹಕಾರಿ ಸಂಘಗಳು ಇನ್ನು ಒಂದು ವರ್ಷದಲ್ಲಿ ಮುಗಿದು ಹೋಗಬಹುದು, ಬಂದ್ ಆಗಿಬಿಡಬಹುದು ಎನ್ನುವಂತಹ ಭಾವನೆ, ಭಯ ಬಹಳ ಜನಕ್ಕೆ ಬರುತ್ತಿದೆ. ಹೀಗಾಗುವುದರಿಂದ ಸಹಕಾರಿ ರಂಗವನ್ನೇ ನೆಚ್ಚಿಕೊಂಡಿರುವಂತಹ ಜನ ಏನು ಇದ್ದಾರೆ, ಅದರಿಂದ ಮುಂಬರುವ ದಿವಸಗಳಲ್ಲಿ ಶೋಷಣೆಗೆ ಒಳಗಾಗಬಹುದು ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಆಗಬಹುದು. ಸಹಕಾರಿ ರಂಗ ಹುಟ್ಟಲಿಕ್ಕೆ ಕಾರಣ ಏನಾಯಿತು ಎನ್ನುವುದನ್ನು ತಾವು ನೋಡಿರಬಹುದು. 100 ವರ್ಷಗಳ ಹಿಂದೆ ಅದು ಹುಟ್ಟಲಿಕ್ಕೆ ಕಾರಣ ಅಂದರೆ ಖಾಸಗಿ ವ್ಯಕ್ತಿಗಳಿಂದ ಅಡವು ಇಟ್ಟು ತಮ್ಮ ಆಸ್ತಿಗಳನ್ನು ಪಡೆದುಕೊಂಡಂತಹ ಜನ ಅದರಿಂದ ಮುಕ್ತಿ ಹೊಂದಬೇಕು ಎನ್ನುವ ಉದ್ದೇಶಕ್ಕಾಗಿ ಇಂತಹ ಸಹಕಾರಿ ರಂಗಗಳನ್ನು ಸ್ಥಾಪನೆ ಮಾಡಿದರು. ಎಲ್ಲರೂ ನಮಗಾಗಿ, 'ನಾವೆಲ್ಲಾ ನಮಗಾಗಿ' ಎನ್ನುವಂತಹ ಭಾವನೆ ಇರಬೇಕು ಇನ್ನುವ ಸದುದ್ದೇಶದಿಂದ ಪ್ರಾರಂಭ ಮಾಡಿದಂತಹ ಸಹಕಾರಿ ರಂಗ ಇವತ್ತು 12000– 13000 ಸಹಕಾರಿ ಸಂಘಗಳು ಬಂದ್ ಆಗುವಂತಹ ಪರಿಸ್ಥಿತಿ ನಿರ್ಮಾಣ ಆಗಿದ್ದಾದರೆ ಶತಮಾನೋತ್ಸವದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತು ಅದಕ್ಕೆ ಒಂದು ಸರಿಯಾದ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದ್ದು ಅತ್ಯಂತ ಅವಶ್ಯ ಎಂದು ನಾನು ಭಾವಿಸಿಕೊಂಡಿದ್ದೇನೆ. ಸುಮಾರು 1742 ಕೋಟಿ ರೂಪಾಯಿಗಳಷ್ಟು ಹಣವನ್ನು ಇದರಲ್ಲಿ ಶೇರು ಹಣವನ್ನಾಗಿ ತೊಡಗಿಸಿದ್ದಾರೆ. ಇಷ್ಟು ದೊಡ್ಡ ಮೊತ್ತದ ಶೇರು ಹಣವನ್ನು ತೊಡಗಿಸಿರುವುದು ಬೇರೆ ಎಲ್ಲಿಯೂ ಇರಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೇನೆ. ಇದರ ಜೊತೆಗೆ ಸುಮಾರು 15,000 ಕೋಟಿ ರೂ.ಗಿಂತ ಹೆಚ್ಚು ಹಣ ಠೇವಣಿಯನ್ನು ಜನ ಇದರಲ್ಲಿ ಇಟ್ಟಿದ್ದಾರೆ. ಆ ಠೇವಣಿದಾರರಿಗೂ ಸಹ ಇವತ್ತು ಭಯ ಬರುವಂತಹ ಪರಿಸ್ಥಿತಿ ನಿರ್ಮಾಣ

ಆಗಿರುವುದರಿಂದ ನಾವು ಇವತ್ತು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಈ ಸಹಕಾರಿ ಸಂಘಗಳನ್ನು ಉದ್ಧಾರ ಮಾಡಬೇಕಾದಂತಹ ವಿಚಾರದಲ್ಲಿ ಯಾವ ಮಟ್ಟಕ್ಕೆ ನಾವು ಹೋಗಬೇಕಾಗಿದೆ? ನಾವೆಲ್ಲಾ ಇವತ್ತು ನೋಡುತ್ತಿದ್ದೇವೆ. ಪ್ರತಿ ಒಬ್ಬರೂ ಸಹಿತ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದಿಂದ ಸಾಲ ಪಡೆಯಬೇಕಾದಂತಹ ವ್ಯಕ್ತಿ, ಇವತ್ತು ಆ ಪತ್ತಿನ ಸಹಕಾರಿ ಸಂಘದ ಮೇಲೆ ವಿಶ್ವಾಸ ವರ್ಷ ವರ್ಷ ಕಡಿಮೆ ಆಗುತ್ತಿದೆ. ಕಳೆದ ಹತ್ತು ವರ್ಷಗಳಿಂದ ಈಚೆಗೆ ನೋಡುತ್ತಿರಬೇಕಾದರೆ ಇಡೀ ರಾಜ್ಯದಲ್ಲಿ ಇವತ್ತು 4586 ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ಇದ್ದಾವೆ. ಇದರಲ್ಲಿ 52 ಲಕ್ಷ ಜನ ಸದಸ್ಯರು ಇದ್ದಾರೆ. ಇಷ್ಟು ಜನ ಸದಸ್ಯರು ಇದ್ದರೂ ಸಹಿತ ಅವರಿಗೆ ಸಾಲ ಕೊಡಬೇಕಾದವರಿಗೆ, ಪ್ರತಿ ವರ್ಷ ಹತ್ತರಿಂದ ಹದಿನೈದು ಲಕ್ಷ ಜನರಿಗೆ ಮಾತ್ರ ಸಾಲ ಕೊಡಲಿಕ್ಕೆ ಸಾಧ್ಯತೆ ಆಗುತ್ತಿದೆ. ಎಲ್ಲಾ ರೈತರುಗಳು ಸಹಿತ ಸಾಲ ಪಡೆಯಲಿಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯತೆ ಆಗುತ್ತಿಲ್ಲ. ಅನೇಕ ಜನ ಸದಸ್ಯರು ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಸಿಗದೇ ಇರುವುದರಿಂದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮತ್ತು ಖಾಸಗಿ ವ್ಯಕ್ತಿಗಳಲ್ಲಿ ಸಾಲ ಪಡೆಯಬೇಕಾದಂತಹ ಪರಿಸ್ಥಿತಿ ನಿರ್ಮಾಣ ಆಗುತ್ತಿದೆ. ಇವೆಲ್ಲ ಇರಬೇಕಾದಾಗ ತಾವು ಯಾವ ರೀತಿ ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಬೇಕು ಎನ್ನುವುದನ್ನು ಸಹಿತ ಅತ್ಯಂತ ಗಮನಿಸಬೇಕಾದಂತಹ ಅಂಶ ಎಂದು ನಾನು ಭಾವಿಸಿಕೊಂಡಿದ್ದೇನೆ. ಇವತ್ತು ಸಹಕಾರಿ ಬ್ಯಾಂಕುಗಳಲ್ಲಿ ಪ್ರಾಥಮಿಕ ಪತ್ತಿನ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಕೊಡಬೇಕಾದಂತಹ ಸಂದರ್ಭದಲ್ಲಿ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಸಾಲ ಕೊಡುವಂತಹ ವ್ಯವಸ್ಥೆಯನ್ನೂ ಸಹಿತ ಇದುವರೆಗೂ ಮಾಡಲಿಕ್ಕೆ ಆಗಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇವತ್ತೇನು ಸ್ಕೇಲ್ ಆಫ್ ಫೈನಾನ್ಸ್‌ನಲ್ಲಿ ಕೊಡುತ್ತಾರೆ, ಅದರ ಒಂದನೇ ನಾಲ್ಕು ಅಂಶಕ್ಕಿಂತ ಕಡಿಮೆ ಎಷ್ಟೋ ಬ್ಯಾಂಕುಗಳಲ್ಲಿ ಕೊಡುವಂತಹ ಪರಿಸ್ಥಿತಿ ನಿರ್ಮಾಣ ಆಗಿದ್ದು ಸಹಿತ ನಮ್ಮ ಗಮನಕ್ಕೆ ಬಂದಿದೆ. ಆ ಕಾರಣದಿಂದ ಇವತ್ತು ಸರ್ಕಾರ ಅದನ್ನು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಇವತ್ತು ನಾವು ನೋಡುತ್ತಿದ್ದೇವೆ. ರಾಜ್ಯದಲ್ಲಿ ಸುಮಾರು 21 ಜಿಲ್ಲಾ ಕೇಂದ್ರ ಬ್ಯಾಂಕುಗಳು ಇದ್ದರೂ ಸಹಿತ, 21 ಬ್ಯಾಂಕುಗಳಲ್ಲಿ 6 ಬ್ಯಾಂಕು ಹಾನಿಯನ್ನು ಅನುಭವಿಸುತ್ತಿದ್ದಾವೆ. ಇವತ್ತು ಜಿಲ್ಲಾ ಕೇಂದ್ರ ಬ್ಯಾಂಕುಗಳು ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳಿಗೆ

ಕೊಡಬೇಕಾಗಿರುವಂತಹ ಕಾಲಕಾಲಕ್ಕೆ ಸಾಲದ ಪ್ರಮಾಣವನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡದಂತಹ ಪರಿಸ್ಥಿತಿಗೆ, ದುಸ್ಥಿತಿಗೆ ಬಂದು ಜಿಲ್ಲಾ ಬ್ಯಾಂಕುಗಳ ಇವತ್ತು 6 ಬ್ಯಾಂಕುಗಳಲ್ಲಿ 47 ಕೋಟಿ ರೂಪಾಯಿ ಹಾನಿಯನ್ನು ಅನುಭವಿಸುತ್ತಿದೆ. ಜೊತೆಗೆ ಇವತ್ತು ಈ ವರ್ಷದ ಪರಿಸ್ಥಿತಿಯಲ್ಲಿ ಇನ್ನೂ ಅನೇಕ ಜಿಲ್ಲಾ ಬ್ಯಾಂಕುಗಳು ಹಾನಿಗೆ ಒಳಗಾಗಬಹುದು ಎನ್ನುವಂತಹ ಭಯ ಕಾಡುತ್ತಿದೆ. ಇದಕ್ಕೆಲ್ಲಾ ಕಾರಣ ಏನು ಎಂದು ಹೇಳಿದರೆ, ಬಡ್ಡಿ ಮನ್ನಾದಂತಹ ವಿಚಾರದಲ್ಲಿ ಮತ್ತು ಸರ್ಕಾರ ಕಾಲ ಕಾಲಕ್ಕೆ ಕೊಡಬೇಕಾಗಿರುವಂತಹ ಸಹಾಯಧನದ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರ ಪರಿಣಾಮವಾಗಿ ಇವತ್ತು ಈ ಸಂಸ್ಥೆಗಳು ಉಳಿಯದಂತಹ ಪರಿಸ್ಥಿತಿಗೆ ಬಂದಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಲ್ಲಿ ಇಚ್ಛೆಪಡುತ್ತಿದ್ದೇನೆ. ಆ ಕಾರಣದಿಂದ ಇಡೀ ರಾಜ್ಯಾದ್ಯಂತ ಸಹಕಾರಿ ರಂಗದಲ್ಲಿ ಸಾಲ ಪಡೆಯುವಂಥ ವ್ಯವಸ್ಥೆ ತಮಗೆಲ್ಲರಿಗೂ ಗೊತ್ತಿರುವಂತೆ, ಇವೊತ್ತು 65 ರಿಂದ 70 ಲಕ್ಷ ರೈತರು ಇರಬೇಕಾದರೆ, 10ರಿಂದ 15 ಲಕ್ಷ ರೈತರು ಮಾತ್ರ ಇದರಿಂದ ಸಾಲ ಪಡೆಯುವುದಕ್ಕೆ ಸಾಧ್ಯವಾಗುತ್ತಿದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂಬುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗೆ ಸಂಬಂಧಿಸಿದಂತೆ ಇಡೀ ರಾಜ್ಯದಲ್ಲಿ ಇವೊತ್ತು 177 ಬ್ಯಾಂಕುಗಳಿದ್ದರೆ, 155 ಬ್ಯಾಂಕುಗಳು ಹಾನಿಗೊಳಗಾಗಿವೆ. ಅವು 103 ಕೋಟಿ ರೂಪಾಯಿಗಳಷ್ಟು ಹಾನಿ ಅನುಭವಿಸುತ್ತಿವೆ. 22 ಬ್ಯಾಂಕುಗಳು ಮಾತ್ರ ಇವೊತ್ತು ಲಾಭ ಗಳಿಸುತ್ತಿವೆ ಎಂದು ಹೇಳಿದರೆ, ಇವೊತ್ತು ಏನಾಗಿದೆಯೆಂದರೆ ಜಿಲ್ಲೆಗೆ ಒಂದೊಂದು ಬ್ಯಾಂಕುಗಳನ್ನು ಇಟ್ಟುಕೊಂಡು ಇಡೀ ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಥವಾ ರಾಜ್ಯ ಮಟ್ಟದ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಒಂದೊಂದೇ ಶಾಖೆಗಳು ಮಾತ್ರ ಲಾಭದಾಯಕವಾಗಿ ನಡೆಯುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ತಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆ ಜಿಲ್ಲೆಯಿಂದ ಬರಬೇಕಾದಂಥ ಪ್ರತಿನಿಧಿಗಳು ಕನಿಷ್ಠ ಆ ಜಿಲ್ಲೆಯಲ್ಲಿರುವ ಸಹಕಾರಿಗಳನ್ನು 2–3 ವರ್ಷಗಳಿಗಿಂತ ಹೆಚ್ಚು ಎಲಿಜಿಬಿಲಿಟಿ ಇದ್ದರೆ ಮಾತ್ರ ಅವರು ಚುನಾವಣೆಯಲ್ಲಿ ಸ್ಪರ್ಧಿಸಬಹುದೆಂದು ಮಾಡಿದ್ದರೆ, ಅದರ ಬಗ್ಗೆ ಕಾಳಜಿ ತೆಗೆದುಕೊಳ್ಳಬಹುದೇನೋ. ಈಗ ಏನಾಗುತ್ತದೆಂದರೆ, ಒಂದು ಬ್ಯಾಂಕನ್ನು ಇಟ್ಟುಕೊಂಡುಬಿಟ್ಟರೆ, ಆ ಒಂದೇ ಬ್ಯಾಂಕಿನ ಪ್ರತಿನಿಧಿ ಚುನಾವಣೆಯಲ್ಲಿ

ಸ್ಪರ್ಧೆ ಮಾಡುವುದು, ಅವನು ನೇರವಾಗಿ ಇಲ್ಲಿಗೆ ಆಯ್ಕೆಯಾಗಿ ಬರುವುದು. ಇದು ಏನು ತೋರಿಸುತ್ತದೆ? ಕೆಲವೇ ಕೆಲವು ರಾಜಕಾರಣಿಗಳ ಕಪಿಮುಷ್ಟಿಯಲ್ಲಿ ಉಳಿದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇವೊತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಮತ್ತು ಅಪೆಕ್ಸ್ ಬ್ಯಾಂಕ್‌ಗಳ ಬದಲಾಗಿ ಏನಾದರೂ ಎರಡೂ ಬ್ಯಾಂಕುಗಳನ್ನು ಸೇರಿಸಿ ಒಂದು ಬ್ಯಾಂಕ್ ಎಂದು ಮಾಡುವ ವಿಚಾರಕ್ಕೆ ತಾವು ಬರುತ್ತೀರೋ ಹೇಗೆ ಎಂಬ ಬಗ್ಗೆ ಚಿಂತನೆ ಮಾಡಬೇಕಾದ ಕಾಲವಾಗಿದೆ. ಏಕೆಂದರೆ, ಇವೊತ್ತು ಲಾಂಗ್ ಟರ್ಮ್ ಲೋನ್ ಕೊಳ್ಳುವ ಸಲುವಾಗಿ ಪಿಎಲ್‌ಡಿ ಬ್ಯಾಂಕ್‌ಗೆ ಹೋಗಬೇಕು. ಶಾರ್ಟ್ ಟರ್ಮ್ ಲೋನ್ ಸಲುವಾಗಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಕ್ಕೆ ಹೋಗಬೇಕು. ಇದರ ಬದಲಾಗಿ ರಾಜ್ಯಮಟ್ಟದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್ ಎರಡನ್ನೂ ಸೇರಿಸಿ ಒಂದೇ ಬ್ಯಾಂಕ್ ಎಂದು ಮಾಡಿ ಪಂಚಾಯಿತಿಗೆ ಒಂದೊಂದು ಸೊಸೈಟಿ ಎಂದು ಮಾಡಿದರೆ ಅವುಗಳು ಈ ಎಲ್ಲಾ ವ್ಯವಹಾರಗಳನ್ನು, ಲಾಂಗ್ ಟರ್ಮ್ ಲೋನ್ ಮತ್ತು ಶಾರ್ಟ್ ಟರ್ಮ್ ಲೋನ್ ಎರಡೂ ಸೇರಿಸಿ ಅಲ್ಲಿಯೇ ಒಂದೇ ಶಾಖೆಯಿಂದ ಕೊಡುವಂಥ ವ್ಯವಸ್ಥೆ ಮಾಡುವುದು ಅತ್ಯಂತ ಸೂಕ್ತವಾದುದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇದನ್ನು ಮಾಡದಿದ್ದರೆ ನೀವು ನಿರೀಕ್ಷೆ ಮಾಡಿದ ಪ್ರಮಾಣಕ್ಕಿಂತ ಹೆಚ್ಚು ಹಾನಿಯನ್ನು ಅನುಭವಿಸುತ್ತಾರೇನೋ ಏನೋ ಅಂತ ಗಂಭೀರವಾದ ಚಿಂತನೆ ನಡೆಯುತ್ತಿದೆ. ಅದಕ್ಕೋಸ್ಕರ, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಇನ್ನು ಮಾರ್ಕೆಟಿಂಗ್ ಸೊಸೈಟಿಗಳು, ಮಾರ್ಕೆಟಿಂಗ್ ಸೊಸೈಟಿಗಳನ್ನು ನಾವು ಇಲ್ಲಿ ನೋಡುತ್ತಿರಬೇಕಾದರೆ, 106 ಸಹಕಾರ ಸಂಘಗಳು, ಮಾರ್ಕೆಟಿಂಗ್ ಸೊಸೈಟಿಗಳು ಅಲ್ಲಿ ಕೆಲಸ ಮಾಡುತ್ತಿದ್ದರೆ, 75 ಸಹಕಾರ ಸಂಘಗಳು, ಮಾರ್ಕೆಟಿಂಗ್ ಸೊಸೈಟಿಗಳು ಈಗಾಗಲೇ ನಿಷ್ಕ್ರಿಯವಾಗಿವೆ. ಸುಮಾರು 7 ಕೋಟಿ 53 ಲಕ್ಷ ರೂಪಾಯಿಗಳಷ್ಟು ಹಾನಿ ಅನುಭವಿಸುತ್ತಿವೆ.

ಶ್ರೀ ಶಿವಾನಂದ ಪಾಟೀಲ್: ಉದಾಸಿಯವರೆ, ನೀವು ಆಗಲೇ ಹೇಳಿದ್ದು, ಪಿಎಲ್‌ಡಿ ಬ್ಯಾಂಕುಗಳನ್ನು ಡಿಸಿಸಿ ಬ್ಯಾಂಕುಗಳ ಜೊತೆ ಮರ್ಜ್ ಮಾಡಿ ಎಂದು. No, he is talking about PLD Banks merging with DCCB. ಕರೆಕ್ಟ್ ಅಲ್ಲವೇ? ಒಂದೇ ಮಾಡಬೇಕೆಂದರೆ, ಪ್ರಾಥಮಿಕ ಹಂತದಲ್ಲೂ ಕೂಡ ಒಂದೇ ಆಗಬೇಕಲ್ಲವೇ? ಹಾಗಾದರೆ, ಲಯಾಬಿಲಿಟಿ

ಯಾರು ತೆಗೆದುಕೊಳ್ಳುವುದು? ಅದನ್ನು ನೀವು ಹೇಳಬೇಕಲ್ಲಾ. ಏಕೆಂದರೆ, ಈಗ ಪಿಎಲ್‌ಡಿ ಬ್ಯಾಂಕ್ಸ್ ಎಷ್ಟು ಲಾಸ್‌ನಲ್ಲಿ ಇದೆಯೆಂದು ನೀವೇ ಹೇಳಿದ್ದೀರಿ. 110 ಕೋಟಿ ರೂಪಾಯಿಗಳ ತನಕ ಲಾಸ್‌ನಲ್ಲಿದೆ. ನಾಳೆ ದಿವಸ ಹಾನಿಯಲ್ಲಿರುವ ಪಿಎಲ್‌ಡಿ ಬ್ಯಾಂಕುಗಳನ್ನು ಲಾಭದಲ್ಲಿರುವ ಡಿಸಿಸಿ ಬ್ಯಾಂಕುಗಳೊಂದಿಗೆ ತೆಗೆದುಕೊಂಡರೆ, ಆಗ ಅವರ ಹಣೆಬರಹ ಏನಾಗುತ್ತದೆ? ನೀವು ಅದನ್ನೂ ಕೂಡ ಹೀಗೆಯೇ ಹೇಳಿ. ಆಕಸ್ಮಾತ್ ಮರ್ಜ್ ಮಾಡಿ ಎಂದು ಹೇಳಿದ ಮೇಲೆ ಅವರು ಮಾಡಿಬಿಟ್ಟರೆ ಆಮೇಲೆ ಇರುವ ಡಿಸಿಸಿ ಬ್ಯಾಂಕುಗಳು ಕೂಡ ಲಾಸ್‌ನಲ್ಲಿ ಬರುತ್ತವೆ.

ಶ್ರೀ ಸಿ.ಎಂ. ಉದಾಸಿ: ಈಗ ಮಾನ್ಯ ಸದಸ್ಯರ ಕಳಕಳಿ ಗಮನಿಸಬೇಕಾಗಿದ್ದೇ. ಏಕೆಂದರೆ, ಮುಂದೊಂದು ದಿವಸ ಈ ಬ್ಯಾಂಕುಗಳೇ ಮುಚ್ಚಿಹೋಗುವಂಥ ಪರಿಸ್ಥಿತಿ ಇರಬೇಕಾದರೆ ಸರ್ಕಾರ ಇದರ ರಕ್ಷಣೆಗೆ ಬರಲೇಬೇಕು. ಇಲ್ಲದಿದ್ದರೆ, ಇದರ ಹೊರೆಯನ್ನೆಲ್ಲಾ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕುಗಳು ಮತ್ತು ಅಪೆಕ್ಸ್ ಬ್ಯಾಂಕುಗಳು ಹೊರುವಂಥ ಪರಿಸ್ಥಿತಿ ಬರಬಾರದು ಎನ್ನುವಂಥ ಉದ್ದೇಶದಿಂದ ಡಿಸ್ಟ್ರಿಕ್ಟ್ ಬ್ಯಾಂಕ್‌ನ ಅಧ್ಯಕ್ಷರಾದ ಸನ್ಮಾನ್ಯ ಶಿವಾನಂದ ಪಾಟೀಲರ ಕಳಕಳಿ ಎಂಬುದು ನನಗೆ ಭಾವನೆ ಬರುತ್ತದೆ. ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಅವರು ಹೇಳುವಂತಹ ಸಲಹೆ ಕೂಡ ಸೂಕ್ತವಾದುದೆಂದು ನಾನು ಭಾವಿಸಿಕೊಂಡಿದ್ದೇನೆ. ಆ ರೀತಿ ಚಿಂತನೆ ಮಾಡಿದ್ದೇಯಾದರೆ ಆ ವ್ಯವಸ್ಥೆಯಲ್ಲೊಂದು ಬದಲಾವಣೆ ತರುವುದಕ್ಕೆ ಸಾಧ್ಯವಾಗುತ್ತದೆ. ಮಾರ್ಕೆಟಿಂಗ್ ಸೊಸೈಟಿಗಳನ್ನು ನಾವು ಯಾವ ಉದ್ದೇಶಕ್ಕಾಗಿ ಮಾಡಿದೆವೋ, ಇವೊತ್ತು ಆ ಉದ್ದೇಶದಿಂದ ಕಾರ್ಯ ನಿರ್ವಹಣೆ ಮಾಡುತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಉದಾಸಿಯವರೆ, ಅವರು ತೆಗೆದಂಥಾದ್ದು ನಿಜವಾಗಿಯೂ ಬಹಳ ಒಳ್ಳೆಯ ವಿಚಾರವಾಗಿದೆ. ಈಗ ಎರಡೂ ಬ್ಯಾಂಕುಗಳು ಉಳಿಯುವಂಥ ಸ್ಥಿತಿಯಿಲ್ಲ. ಗ್ಯಾಪ್ ಮತ್ತು ಹಾನಿ ನೋಡಿದರೆ ಎರಡೂ ಕೂಡ ಮುಚ್ಚಿಹೋಗುವಂಥ ಪರಿಸ್ಥಿತಿ ಇದೆ. ಅದಕ್ಕೋಸ್ಕರ, ಹಿಂದೆ ಸೆಂಟ್ರಲ್ ಗವರ್ನ್‌ಮೆಂಟ್‌ನವರು ಈಗ cleansing the balance sheet, ಸ್ವಚ್ಛಗೊಳಿಸುವ ದೃಷ್ಟಿಯಿಂದ ಇವೊತ್ತು ಸ್ಕೀಮ್ ತಂದಿದ್ದಾರೆ. ಹಿಂದಿನ ಸಲ ನಾನು ಅಲ್ಲಿ ಕುಳಿತಿದ್ದಾಗಲೂ ಹೇಳಿದೆ. ಬಜೆಟ್‌ನಲ್ಲಿ ಕೇವಲ 20 ಕೋಟಿ ರೂಪಾಯಿ ಪ್ರಾವಿಜನ್ ಮಾಡಿಕೊಂಡುಬಿಟ್ಟರೆ, ಬಹುಶಃ ಅದನ್ನು ಕ್ಲೀನ್ ಮಾಡಿಬಿಟ್ಟರೆ ಎರಡೂ ಸಂಸ್ಥೆಗಳನ್ನೂ ಉಳಿಸಿಕೊಳ್ಳಲು ಸಾಧ್ಯವಿದೆ.

ಶ್ರೀ ಶಿವಾನಂದ ಪಾಟೀಲ್: ಎರಡನ್ನೂ ಉಳಿಸುವುದರಲ್ಲಿ ಅರ್ಥವಿಲ್ಲ. ಮಾನ್ಯ ಉದಾಸಿಯವರು ಹೇಳುವುದು ಕರೆಕ್ಟ್ ಇದೆ. ಡಿಸಿಸಿ ಬ್ಯಾಂಕ್ ಲಾಂಗ್ ಟರ್ಮ್ ಲೋನ್ ಕೊಡುತ್ತಿದೆ. ಮೀಡಿಯಂ ಟರ್ಮ್ ಲೋನ್ ಈಗ ಕೊಡುತ್ತಿದೆ. already ನೀವಿದ್ದಾಗಲೇ ನಾವು ಕೊಡುವುದಕ್ಕೆ ಶುರು ಮಾಡಿದ್ದೇವೆ. ಅದರ ಉದ್ದೇಶ ಇಬ್ಬರದೂ ಕೃಷಿ ಕಾರ್ಮಿಕ.......

ಶ್ರೀ ಎಸ್.ಎಸ್.ಪಾಟೀಲ್: ನಾನು ಹೇಳಿದ್ದು, ಅದನ್ನು ನೀವು ಏಕ್‌ದಂ ಮುಚ್ಚುವುದಕ್ಕೆ ಹೋದರೆ ನೀವು ಹೇಳಿದ ಪರಿಸ್ಥಿತಿ ಬರುತ್ತದೆ. ಅದನ್ನು ಮುಂದೆ ವಿಚಾರ ಮಾಡೋಣ. ಇವೊತ್ತು ಕ್ಲೀನ್ ಆಗಲಿ. ಎರಡೂ ಬ್ಯಾಲೆನ್ಸ್ ಷೀಟ್ ಕ್ಲೀನ್ ಆದ ಮೇಲೆ, ಅದು ಸ್ವಚ್ಛವಾದ ಮೇಲೆ, ಎರಡನ್ನೂ ಲಾಭದಲ್ಲಿ ಬಂದ ಮೇಲೆ ಕೂಡಿಸಬೇಕೋ ಬಿಡುವುದೋ ಚಿಂತನೆ ಮಾಡಿಕೊಂಡು......

ಶ್ರೀ ಸಿ.ಎಂ.ಉದಾಸಿ: ಈಗ ಒಂದು ಆಲೋಚನೆ ಮಾಡಬೇಕಾಗಿದೆ. ನಬಾರ್ಡ್‌ನಿಂದ ಸಾಲ ಪಡೆದ ಹಣವನ್ನು ನಾವು ಏನು ವಿತರಣೆ ಮಾಡುತ್ತಿದ್ದೇವೆ. 3-tier system ಬದಲಾಗಿ 2-tier system ಮಾಡಲು ಇದೊಂದು ಅನುಕೂಲವಾಗುತ್ತದೆ. ನೇರವಾಗಿ ರಾಜ್ಯಮಟ್ಟದಲ್ಲಿ ಒಂದು ಬ್ಯಾಂಕ್ ಆಗಿ ಅಲ್ಲಿಂದ ನೇರವಾಗಿ ನೀವು ಪ್ರಾಥಮಿಕ ಪತ್ತಿನ ಸಹಕಾರ ಸಂಘಕ್ಕೆ ಹೋಗುವುದಾದರೆ, ಮಧ್ಯವರ್ತಿಗಳಾಗಿ ಕೆಲಸ ಮಾಡುವಂಥ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕುಗಳಾಗಲಿ, ಡಿಸ್ಟ್ರಿಕ್ಟ್ ಲ್ಯಾಂಡ್ ಬ್ಯಾಂಕುಗಳಾಗಲಿ ಅವಶ್ಯಕತೆ ಬೀಳಲಿಕ್ಕಿಲ್ಲ ಎನ್ನುವಂಥ ಭಾವನೆ ನನಗಿದೆ. ಅದಕ್ಕೋಸ್ಕರ, ಆ ರೀತಿಯಾದ ವ್ಯವಸ್ಥೆ ಮಾಡುವುದು, ಟು ಟಯರ್ ಸಿಸ್ಟಮ್ ಮಾಡುವುದು ಬಹಳ ಚೆನ್ನಾಗಿರುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ: ನಬಾರ್ಡ್‌ನಿಂದ ರಿ-ಫೈನಾನ್ಸ್ ಆಗುವುದು ಎಷ್ಟು? 26, 28 ಅಥವಾ 30 ಪರ್ಸೆಂಟ್, ಬಾಕಿ ಎಲ್ಲಾ ಹಣ ಅಪೆಕ್ಸ್ ಬ್ಯಾಂಡ್ ಅಂಡ್ ಡಿಸಿಸಿ ಬ್ಯಾಂಕ್ ಕೊಡುತ್ತಾರೆ. Please understand .ಈಗ ಉದಾಹರಣೆಗೆ, ನಾರ್ತ್ ಕೆನರಾ ಡಿಸಿಸಿ ಬ್ಯಾಂಕ್. ಒಂದೂ ದುಡ್ಡೂ ತೆಗೆದುಕೊಳ್ಳುವುದಿಲ್ಲ. ನಬಾರ್ಡ್ ಕಡೆಯಿಂದ All other banks they take, but they don`t take more than 25-30% ಬಾಕಿ ಎಲ್ಲಾ ಹಣ ಎಲ್ಲಿತ್ತು? ಅವರ ಡಿಪಾಸಿಟರ್ಸ್, ಡಿಸಿಸಿ ಬ್ಯಾಂಕ್ ಡಿಪಾಸಿಟ್ಸ್, ಅಪೆಕ್ಸ್ ಬ್ಯಾಂಕ್ ಡಿಪಾಸಿಟ್ಸ್, ಗವರ್ನಮೆಂಟ್‌ನವರು ಗ್ಯಾರಂಟಿ ಕೊಡುತ್ತಾರೆ, ನಾಳೆ ಆ ಪ್ರಕಾರ

ಹೋದರೆ then it cannot work. How can it work? Then, where is the money? Then NABARD should give 100%. NABARD if it is willing finance 100%, then it is possible; otherwise it is impossible.

ಶ್ರೀ ಸಿ.ಎಂ.ಉದಾಸಿ: ಹಣಕಾಸಿನ ನೆರವಿನ ಬಗ್ಗೆ ಮಾನ್ಯ ಸಚಿವರು ಹೇಳುವ ಮಾತು ಸತ್ಯ. ಆದರೂ ಸಹ ಮೂರು ಟಯರ್ ಬದಲಾಗಿ ಟು ಟಯರ್ ಮಾಡುವುದರಿಂದ ಆಗಬಹುದಾದ ವೆಚ್ಚದಿಂದ ಮತ್ತು ಹಾನಿ ಗಮನದಲ್ಲಿಟ್ಟುಕೊಂಡು, ಮೇಂಟನೆನ್ಸ್ ಎಕ್ಸ್‌ಪೆಂಡಿಚರ್ ಬರುತ್ತದಲ್ಲಾ, ಅದನ್ನು ಗಮನದಲ್ಲಿಟ್ಟುಕೊಂಡು ಏನು ಮಾಡಬಹುದೆಂಬುದನ್ನು ತಾವು ಗಮನಿಸಬೇಕಾಗಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಒಂದು ಮಾತನ್ನು ಎಸ್.ಎಸ್.ಪಾಟೀಲರು ಹೇಳಿದ ಹಾಗೆ, ಅವರು ಗ್ಯಾಪ್‌ನ ಪ್ರಶ್ನೆ ಹೇಳಿದರು. ಇವೊತ್ತು ಧಾರವಾಡದ ಕೆಸಿಸಿ ಬ್ಯಾಂಕ್ ಒಂದರದೇ 62 ಕೋಟಿ ರೂಪಾಯಿಗಳಷ್ಟು ಗ್ಯಾಪ್ ಇದೆ. ಇಷ್ಟು ಮೊತ್ತದ ಗ್ಯಾಪ್ ಇರಬೇಕಾದರೆ, ಇನ್ನು ಇಡೀ ರಾಜ್ಯಾದ್ಯಂತ ಇರುವ ಗ್ಯಾಪ್ ನನಗನ್ನಿಸುತ್ತದೆ: ಕನಿಷ್ಠ 400–500 ಕೋಟಿ ರೂಪಾಯಿಗಳಷ್ಟಾದರೂ ಗ್ಯಾಪ್ ಇರಬಹುದೆಂದು ನನಗೆ ಭಾವನೆ ಇದೆ. ಪಿಎಲ್‌ಡಿ ಬ್ಯಾಂಕ್ ಮತ್ತು ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲೂ ಸಹ ಗ್ಯಾಪ್ ಇದೆ. ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಲ್ಲೂ ಗ್ಯಾಪ್ ಇದೆ. ಈ ಎಲ್ಲಾ ಗ್ಯಾಪ್‌ಗಳನ್ನೂ ನೀವು ಸರಿಪಡಿಸಬೇಕಾದ ಕೆಲಸದಲ್ಲಿ ಒಂದು ಸರಿಯಾದ ವ್ಯವಸ್ಥೆ ಬರದಿದ್ದರೆ, ಬಹಳ ಕಷ್ಟವಾಗುತ್ತದೆ. ಈ ಗ್ಯಾಪ್ ಉಳಿಯುವುದಕ್ಕೆ ಕಾರಣಗಳೇನು ಎಂಬುದು ತಮ್ಮ ಗಮನಕ್ಕೆ ಬಂದಿರಬಹುದು. ಏಕೆಂದರೆ, ಈ ವೆಚ್ಚ ಮಾಡುತ್ತಿರುವಂಥ, ಆಡಳಿತ ವೆಚ್ಚದಲ್ಲಾಗುವಂಥ ಹಾನಿ ಮತ್ತು ಕಾಲಕಾಲಕ್ಕೆ ಸಕಾಲಕ್ಕೆ ರಾಜ್ಯ ಸರ್ಕಾರದಿಂದ ಬಡ್ಡಿ ಮನ್ನಾದಲ್ಲಿ ಕೊಡುವ ಸೌಲಭ್ಯಗಳ ವಿನಾಯಿತಿ ಕೊಟ್ಟಾಗ 1983 ರಿಂದೀಚೆಗೆ ನಾವು ನೋಡಿಕೊಂಡು ಬಂದಾಗ ಪ್ರತಿ ಸಾರಿಯೂ ಸರ್ಕಾರದಿಂದ ವಿತರಣೆ ಮಾಡಬೇಕಾಗಿದ್ದು ವಿಳಂಬವಾಗಿದ್ದರ ಪರಿಣಾಮವಾಗಿ ಈ ಸಂಸ್ಥೆಗಳು ಹಾನಿಗೊಳಗಾಗಲು ಕಾರಣವಾಗಿದೆ ಎನ್ನುವುದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಇದನ್ನು ಹೇಳಿ ಇನ್ನು ಮಾರ್ಕೆಟಿಂಗ್ ಸೊಸೈಟಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾರ್ಕೆಟಿಂಗ್ ಸೊಸೈಟಿಗಳ ಮೂಲ ಉದ್ದೇಶಗಳೇನು? ರೈತರು ಬೆಳೆದಂಥ ಮಾಲನ್ನು ಅವರು ಮಾರುಕಟ್ಟೆಗೆ ತೆಗೆದುಕೊಂಡು ಬಂದು ಮಾರಾಟ ಮಾಡುವಂಥ ವ್ಯವಸ್ಥೆಗೆ

ಬೇಕಾಗಿರುವಂಥ ಅವರು ಕಮೀಷನ್ ಏಜೆಂಟ್ ಆಗಿ ಕೆಲಸ ಮಾಡಬೇಕಾಗಿದೆ. TAPCMS (Taluk Agricultural Produce Co-operative Marketing Society) ಏನಿವೆ, ಅವರು ಮಾಡಬೇಕಾಗಿರುವ ಉದ್ದೇಶಗಳೇನು? ಮಾರುಕಟ್ಟೆಯಲ್ಲಿ ರೈತರ ಮಾಲುಗಳನ್ನು ಆವಕ ಮಾಡಿಕೊಂಡಾಗ, ಅವನ್ನು ಖರೀದಿ ಮಾಡಿ ಅಥವಾ ಪ್ರೋಸೆಸ್ ಮಾಡಿ ಮಾರಾಟ ಮಾಡುವುದು ಅಥವಾ ಬೇರೆ ದಳ್ಳಾಳಿಗಳಿಗೆ ಮಾರಾಟ ಮಾಡುವಂಥ ವ್ಯವಸ್ಥೆ ಮಾಡಬೇಕು. ಅನೇಕ ಸಲ ನಾವು ನೋಡುತ್ತಿದ್ದೇವೆ. ಇಲ್ಲಿಂದಲೇ ಸಹ ರೈತರು ಮಾರಾಟ ಮಾಡುವಂಥ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಬಂದಾಗ ಖರೀದಿ ಮಾಡಬೇಕಾದ ವ್ಯವಸ್ಥೆಯಲ್ಲಿ ಖರೀದಿದಾರರು ಇವೊತ್ತು ಕಮೀಷನ್ ಕೊಡಬೇಕೆನ್ನುವುದು. ಮೊದಲು ಏನಿತ್ತು. ಯಾರು ಮಾರಾಟ ಮಾಡುತ್ತಿದ್ದರು, ರೈತರು ಕಮೀಷನ್ ಕೊಡಬೇಕೆಂದು ಇತ್ತು. ಅದನ್ನು ಬದಲಾಯಿಸಿ ಖರೀದಿದಾರರು ಕಮೀಷನ್ ಕೊಡಬೇಕೆಂದು ಮಾಡಿದರು. ಆಗ ಮಾನ್ಯ ಜಾಲಪ್ಪನವರು ಸಹಕಾರ ಸಚಿವರಾಗಿದ್ದಾಗ ನಾವು ಪ್ರಸ್ತಾಪಿಸಿದ್ದೆವು. ಇದನ್ನು ಮಾಡುವುದರಿಂದ ಎರಡೂ ಕಡೆಯೂ ಕಮಿಷನ್ ತೆಗೆದುಕೊಳ್ಳುವಂಥ ವ್ಯವಸ್ಥೆಯಾಗುತ್ತದೆ. ಇದರ ಬಗ್ಗೆ ನೀವು ಏನು ಮಾಡಬೇಕೆಂದರೆ, ಸರ್ಕಾರದಲ್ಲಿ ಒಂದು ಇಚ್ಛಾಶಕ್ತಿ ಇರಬೇಕು. ಏನು ಇರಬೇಕೆಂದರೆ, ಮಾರುಕಟ್ಟೆಯಲ್ಲಿ ಖರೀದಿ ಮಾಡಬೇಕಾದ ವಸ್ತುಗಳನ್ನು ಕೇವಲ ಖರೀದಿದಾರರಿಂದಲೇ ತೆಗೆದುಕೊಳ್ಳುವಂಥ ವ್ಯವಸ್ಥೆ ಮಾಡಬೇಕಾದ ವ್ಯವಸ್ಥೆಗೆ ಪ್ಯಾರಲಲ್ ಏಜೆನ್ಸಿಯಾಗಿ ಮಾರ್ಕೆಟಿಂಗ್ ಸೊಸೈಟಿ ಅಲ್ಲಿ ಇಂಟರ್‌ವಿನ್ ಆಗುತ್ತಿದ್ದಿದ್ದರೆ, ಈ ಸಮಸ್ಯೆಯೇ ಬರುತ್ತಿರಲಿಲ್ಲ. ಇವೊತ್ತೂ ಸಹ ನೀವು ಯಾವುದೇ ಮಾರ್ಕೆಟಿಂಗ್ ಸೊಸೈಟಿಯ ವ್ಯವಹಾರ ತೆಗೆದುಕೊಂಡು ನೋಡಿ. ಇವೊತ್ತು 181 ಮಾರ್ಕೆಟಿಂಗ್ ಸೊಸೈಟಿಗಳಿವೆ. ಇಷ್ಟೂ ಸೊಸೈಟಿಗಳಲ್ಲಿ ಇವರು ರೈತರ ಮಾಲನ್ನು ಎಷ್ಟು ತೆಗೆದುಕೊಂಡು ಮಾರಾಟ ಮಾಡಿದ್ದಾರೆಂದು ತೆಗೆದುಕೊಂಡರೆ, ಈ ರಾಜ್ಯದ ಒಟ್ಟು ಶೇಕಡ ಒಂದರಷ್ಟೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ನಮ್ಮ ಹಾವೇರಿ ಜಿಲ್ಲೆಯಲ್ಲಾಂತೂ except ಹಿರೇಕೆರೂರಿನಲ್ಲಿ ಹತ್ತಿಯೊಂದನ್ನು ತೆಗೆದುಕೊಳ್ಳುವುದನ್ನು ಬಿಟ್ಟರೆ ಉಳಿದ ಯಾವ ಸೊಸೈಟಿಯಲ್ಲೂ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಗದಗ್‌ನಲ್ಲಿ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಹತ್ತಿಯನ್ನು ಮಾಡಲು ಸಾಧ್ಯತೆಯಾಗಿತ್ತು. ಉಳಿದ ಎಲ್ಲೂ ಇದನ್ನು ಈ ಮೂರು ಜಿಲ್ಲೆಗಳಲ್ಲಿ ಈ ಎರಡು ಸೊಸೈಟಿಗಳನ್ನು ಮಾತ್ರ ನೋಡಬಹುದೇ

ಹೊರತು ಉಳಿದ ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳು ತಮ್ಮ ಕರ್ತವ್ಯವನ್ನು ಮಾಡುತ್ತಿಲ್ಲ. ರೈತರಿಗೆ ಕೊಡಬೇಕಾಗಿರುವಂಥ ಗೊಬ್ಬರವನ್ನು ವಿತರಣೆ ಮಾಡಬೇಕಾಗಿರುವುದನ್ನಾಗಲಿ ಅಥವಾ ರೇಷನ್‌ಗಳನ್ನು ವಿತರಣೆ ಮಾಡಬೇಕಾಗಿರುವಂಥ ವ್ಯವಸ್ಥೆಯನ್ನಾಗಲಿ ಇದ್ಯಾವುದನ್ನೂ ಮಾಡುತ್ತಿಲ್ಲ. ರೇಷನ್ ಮಾರಾಟ ಮಾಡಬೇಕಾದಂಥ ವ್ಯವಸ್ಥೆಯನ್ನು ಮಾರ್ಕೆಟಿಂಗ್ ಸೊಸೈಟಿಯ ಮುಖೇನ ಮಾಡಿದ್ದಾಗಿದ್ದರೆ ಅನೇಕ ಜನರಿಗೆ ಅದರ ಪ್ರಯೋಜನವಾದರೂ ಆಗುತ್ತಿತ್ತು. ಇವತ್ತು ಆ ಪ್ರಯೋಜನವಾಗುತ್ತಿಲ್ಲ. ಇವತ್ತು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ರೈಸ್ ಮಿಲ್ಲುಗಳು ಇದ್ದಾವೆ, ಅದರಲ್ಲಿ ಇವತ್ತು 59 ರೈಸ್ ಮಿಲ್ಲುಗಳು ಮಾರಾಟ ಮಾಡುವುದರ ಸಲುವಾಗಿ ನೀವು ಅನುಮತಿ ಕೊಟ್ಟಿದ್ದೀರಿ ಎಂಬುದನ್ನು ಒಂದು ಪ್ರಶ್ನೆಗೆ ಉತ್ತರ ಕೊಡಬೇಕಾದಾಗ ತಮ್ಮ ಸಹಕಾರಿ ಇಲಾಖೆಯಿಂದ ಉತ್ತರ ಬರುತ್ತಿದೆ. ಹಾಗಾದರೆ ಇನ್ನೂ 80 ಕ್ಕಿಂತ ಹೆಚ್ಚು ರೈಸ್ ಮಿಲ್ಲುಗಳು ಇದ್ದಾವೆ, ಯಾವ ರೈಸ್ ಮಿಲ್ಲುಗಳು ಫಂಗ್‌ಷನಿಂಗ್ ಇಲ್ಲ. ಖಾಸಗಿ ವ್ಯಕ್ತಿಗಳೇ ಇವತ್ತು ರೈಸ್ ಮಿಲ್ಲುಗಳನ್ನು ಫಂಗ್‌ಷನಿಂಗ್ ಮಾಡಲು ಸಾಧ್ಯವಿಲ್ಲದಂಥ ಪರಿಸ್ಥಿತಿಯೊಳಗೆ ಸಹಕಾರಿ ರಂಗದಲ್ಲೂ ಸಹ ಯಶಸ್ವಿಯಾಗಿ ಮಾಡಲು ಸಾಧ್ಯತೆ ಇಲ್ಲದಿದ್ದರೂ ಸಹ ಏಕೆ ಮೇಲಿಂದ ಮೇಲೆ ಅದಕ್ಕೆ ಫೈನಾನ್ಸ್ ಕೊಡುವುದು, ರಿನೋವೇಷನ್ ಮಾಡುವುದು, ಮಾರ್ಡನೈಜೇಷನ್ ಮಾಡುವುದು? ಇವತ್ತು ಆ ಪರಿಸ್ಥಿತಿ ಏನಾಗಿದೆ ಎಂದರೆ, ಮೂರು ರೂಪಾಯಿ ಕಿ.ಲೊ.ಅಕ್ಕಿ ಮಾರಾಟ ಮಾಡಬೇಕಾದಂಥ ಪರಿಸ್ಥಿತಿ ಬಂದ ಮೇಲೆ, ಕ್ವಾಲಿಟಿ ರೈಸಿನ ಕಾಂಪಿಟೇಷನ್ ಬಂದ ಮೇಲೆ, ಇವತ್ತು ಇರುವಂಥ ಈ ರೈಸ್ ಮಿಲ್ಲುಗಳಿಗೆ ಐದು ಹತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಆ ಉದ್ದಿಮೆಯನ್ನು ಸುಧಾರಣೆ ಮಾಡುವಷ್ಟು ಶಕ್ತಿ ಸಾಮರ್ಥ್ಯ ನಿಮಗೆ ಇಲ್ಲವೇ ಇಲ್ಲ. ಹೀಗಿರುವಾಗ ಈ ಮಾರ್ಕೆಟಿಂಗ್ ಸೊಸೈಟಿಗಳಿಗೆ ರೈಸ್‌ಮಿಲ್ಲುಗಳನ್ನು ಕೊಟ್ಟಿದ್ದು ಎಷ್ಟು ಪ್ರಯೋಜನ ಎಂಬುದನ್ನು ನೀವು ಆಲೋಚನೆ ಮಾಡಬೇಕು. ಇದರ ಬದಲಾಗಿ ಮಾರಾಟ ಮಾಡಲು ಬಂದಿರುವಂಥ ವಸ್ತುಗಳಿಗೆ ಅವರಿಗೆ ಬೇಕಾದಂಥ ಅಡ್ವಾನ್ಸ್‌ನ್ನು ಕೊಡುವಂಥ ವ್ಯವಸ್ಥೆ ಮಾಡಿ ಅಲ್ಲಿ ಮಾಲು ತಂದು ಇಟ್ಟಿದ್ದೇ ಆದರೆ ಹರಾಜು ಮಾಡಿ ಮಾರಾಟ ಮಾಡುವಂಥ ವ್ಯವಸ್ಥೆಗೆ ಸಹಕಾರ ಮಾಡಬೇಕು ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಇವತ್ತು ವ್ಯಾಟ್ ಸಿಸ್ಟಂ ಬಂದಮೇಲೆ ಹೆಚ್ಚು ಹೆಚ್ಚು ಮಾರುಕಟ್ಟೆಗೆ ಮಾಲು ಬರುವಂಥ ಸಂದರ್ಭ ಹೆಚ್ಚಾಗಿರುವುದರಿಂದ ತಾವು

ಅದನ್ನು ಪರಿಗಣಿಸಬೇಕಾಗಿದೆ, ಆ ಎಲ್ಲಾ ಮಾಲು ಸಹ ಮಾರುಕಟ್ಟೆಯ ಮಾರ್ಕೆಟಿಂಗ್ ಸೊಸೈಟಿಯ ಮೂಲಕವೇ ಮಾರಾಟ ಆಗುವಂಥ ವ್ಯವಸ್ಥೆಯನ್ನು ತಾವು ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅದೊಂದು ಹೊಸ ಬದಲಾವಣೆಯನ್ನು ತರಲಿಕ್ಕೆ ತಾವು ಒಂದು ದಾರಿಯನ್ನು ಹುಡುಕಿದಂತಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಗ್ರಾಹಕರ ಸಹಕಾರಿ ಸಂಘಗಳು ಗ್ರಾಹಕರ ಸಹಕಾರಿ ಸಂಘಗಳಲ್ಲಿ 600 ಸಹಕಾರಿ ಸಂಘಗಳು ಲಾಭದಲ್ಲಿ ಇದ್ದರೆ 976 ಸಹಕಾರಿ ಸಂಘಗಳು ಈಗಾಗಲೇ 6 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಾನಿಯನ್ನು ಅನುಭವಿಸುತ್ತಿದ್ದಾವೆ ಎಂದು ಹೇಳಿದ್ದಾರೆ. ಆದರೆ ಈ ಗ್ರಾಹಕರ ಸಹಕಾರಿ ಸಂಘಗಳು ಸಹ ನಾವೇನು ನಿರೀಕ್ಷೆ ಮಾಡಿದ್ದೆವೋ ಆ ಪ್ರಮಾಣದಲ್ಲಿ ಆಗುತ್ತಿಲ್ಲ. ಲಾಭದಲ್ಲಿರುವ ಗ್ರಾಹಕರ ಸಹಕಾರಿ ಸಂಘಗಳಲ್ಲಿ ಅರ್ಧ ಸಹಕಾರಿ ಸಂಘಗಳ ಉದ್ಯೋಗವೇನಿದೆ ಎಂದರೆ ಹಾಸ್ಟೆಲ್‌ಗಳಿಗೆ ಮತ್ತು ಅಂಗನವಾಡಿಗಳಿಗೆ ಆಹಾರಧಾನ್ಯವನ್ನು ಸರಬರಾಜು ಮಾಡಿ ಲಾಭ ಮಡುತ್ತಾರೆಯೇ ಹೊರತು ಸಾರ್ವಜನಿಕರಿಗೆ, ಗ್ರಾಹಕರಿಗೆ ಕೊಡಬೇಕಾದಂಥ ಸಾಮಗ್ರಿಗಳನ್ನು ಕೊಟ್ಟು ಲಾಭ ಮಾಡುತ್ತಿಲ್ಲ. ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಅರ್ಧಕ್ಕಿಂತ ಹೆಚ್ಚು ಸಂಘಗಳು ಬದುಕಿದ್ದರೆ ಇದರಲ್ಲಿ ಕೇವಲ ಸೊಸೈಟಿಗಳಿಂದ ಬದುಕಿದ್ದಾವೆ. ಯಾವ ಉದ್ದೇಶದಲ್ಲಿ ಗ್ರಾಹಕರಿಗೆ ಬೇಕಾಗಿರುವಂಥ ವಸ್ತುಗಳನ್ನು ಖರೀದಿಮಾಡಿ ಮಾರಾಟ ಮಾಡತಕ್ಕ ವ್ಯವಸ್ಥೆಯಾಗಬೇಕಾಗಿದೆ, ಚುರುಕಿನಿಂದ ನಡೆಯಬೇಕಾಗಿದೆ, ಮತ್ತು ಪೈಪೋಟಿ ಇರುವಲ್ಲಿ ಬೇಕಾಗಿರುವಂಥ ಸರಿಯಾದ ರೀತಿಯ ತರಬೇತಿ ಪಡೆದಿರುವಂಥ ಜನರು ಇರಬೇಕಾಗಿದೆ,ಅಲ್ಲಿ ಜನರು ಇಲ್ಲದಿರುವುದರಿಂದ ಇವತ್ತು ನಾವೇನು ನಿರೀಕ್ಷೆ ಮಾಡಿದ್ದೇವೆ ಅಷ್ಟು ಪ್ರಮಾಣದಲ್ಲಿ ಈ ಕೆಲಸವಾಗುತ್ತಿಲ್ಲವೆಂದು ನಾನು ಭಾವಿಸುತ್ತೇನೆ. ಇದಕ್ಕೆ ಕಾಯಕಲ್ಪವಾಗಬೇಕಾಗಿದೆ.

ಇನ್ನು ಗೃಹ ನಿರ್ಮಾಣ ಸಹಕಾರಿ ಸಂಘಗಳು ರಾಜ್ಯದಲ್ಲಿ ಸುಮಾರು 1500 ಗೃಹ ನಿರ್ಮಾಣ ಸಹಕಾರಿ ಸಂಘಗಳು ಇದ್ದಾವೆ. ಅದರಲ್ಲಿ ಬಹುಶ: ಅರ್ಧಕ್ಕಿಂತ ಹೆಚ್ಚು ಗೃಹ ನಿರ್ಮಾಣ ಸಹಕಾರಿ ಸಂಘಗಳು ಇವತ್ತು ಬೆಂಗಳೂರಿನಲ್ಲಿದ್ದಾವೆಂದು ನಾನು ಭಾವಿಸಿಕೊಂಡಿದ್ದೇನೆ. ಬೆಂಗಳೂರಿನಲ್ಲೇ ಈ ಗೃಹ ನಿರ್ಮಾಣ ಸಹಕಾರಿ ಸಂಘಗಳು ಇರಬೇಕಾದರೆ, ಈ ಸಹಕಾರಿ ಸಂಘಗಳಿಂದ ಜನರಿಗೆ ಏಷ್ಟು ಪ್ರಯೋಜನವಾಗಿದೆ ಎನ್ನುವುದನ್ನು ನೀವು

ಗಮನಿಸಬೇಕು. ಬೆಂಗಳೂರಿನ ಜನರಿಗೆ ಇವತ್ತು ಅದನ್ನು ಕೊಡಬೇಕಾಗಿರುವಂಥ ವಿಚಾರದಲ್ಲಿ ಸಹಿತ ಮೂರು ವರ್ಷದ ಒಂದು ರಿಪೋರ್ಟ್‌ನ್ನು ನೀವು ಕೊಟ್ಟಿದ್ದೀರಿ. ಆ ಸಹಕಾರಿ ಸಂಘಗಳದ್ದು ಇವತ್ತು ಕಳೆದ ಮೂರು ವರ್ಷಳಿಂದ ಏನಾದರೂ ಬೆಂಗಳೂರಿನಲ್ಲಿ ಕೊಡುತ್ತಿದ್ದರೆ ಅವರು ಮಾಡುತ್ತಿರುವಂಥ ಉದ್ಯೋಗದಲ್ಲಿ ಸಾರ್ವಜನಿಕರನ್ನು ಲೂಟಿ ಮಾಡುವಂಥ ಕಲಸವೇ ಹೆಚ್ಚಿಗೆ ಆಗಿದೆ ಎನ್ನುವುದನ್ನು ಎಲ್ಲರ ಗಮನಕ್ಕೆ ತರುವಂಥದ್ದು ಇಲ್ಲಿ ಹೇಳಲು ಇಚ್ಛೆಪಡುತ್ತಿದ್ದೇನೆ. ಆ ಗೃಹ ನಿರ್ಮಾಣ ಸಹಕಾರಿ ಸಂಘಗಳ ಮೇಲೆ ತಮ್ಮದು ಏನೂ ನಿಯಂತ್ರಣ ಇಲ್ಲವೇನೋ ಎಂಬ ಅನುಮಾನ ಬರತಕ್ಕ ಸ್ಥಿತಿಯಾಗಿದೆ. ತಮಗೆಲ್ಲಾಗೊತ್ತಿರಬಹುದು, ಬೆಂಗಳೂರಿನ ಒಂದು ಗೃಹ ನಿರ್ಮಾಣ ಸಹಕಾರಿ ಸಂಘದ ಬಗ್ಗೆ ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಇದು ನಿಮ್ಮ ಗಮನಕ್ಕೂ ಬಂದಿರಬಹುದೆಂದು ನಾನು 'ಭಾವಿಸುತ್ತೇನೆ. ಸಹಕಾರ ಕಾಯ್ದೆ ಮತ್ತು ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಈ ನಾಲ್ಕು ಸಹಕಾರ ಗೃಹ ನಿರ್ಮಾಣ ಸಂಘಗಳಿಗೆ ವಿನಾಯಿತಿ ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಸುಮಾರು 30 ಕೋಟಿ ರೂಪಾಯಿಗಳ ನಷ್ಟ ಉಂಟು ಮಾಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಇದರಲ್ಲಿ ರಾಜ್ಯಪಾಲರಿಗೆ ದೂರು ನೀಡಲಾಗಿದ್ದು ಲೋಕಾಯುಕ್ತದವರು ಈ ಪ್ರಕರಣದಲ್ಲಿ ಸಂಬಂಧಿಸಿದಂತೆ ಸಹಕಾರಿ ಇಲಾಖೆಯಿಂದ ತನಿಖೆ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಏನಿದೆ ಎಂದರೆ, ಮಲ್ಲೇಶ್ವರಂನಲ್ಲಿರುವ ದತ್ತಾಪ್ರಸಾದ್ ಸಹಕಾರ ಗೃಹ ನಿರ್ಮಾಣ ಸಹಕಾರಿ ಸಂಘ, ಚಿತ್ರಾಪುರ್ ಗೃಹ ನಿರ್ಮಾಣ ಸಹಕಾರಿ ಸಂಘ, ಕೆನರಾ ಯೂನಿಯನ್ ಗೃಹ ನಿರ್ಮಾಣ ಸಹಕಾರಿ ಸಂಘ, ಪರೇಸ್ ಅಪಾರ್ಟ್‌ಮೆಂಟ್ ಗೃಹ ನಿರ್ಮಾಣ ಸಹಕಾರಿ ಸಂಘಗಳ ವಿರುದ್ಧ ದೂರು ನೀಡಲಾಗಿದೆ. ಇದರಲ್ಲಿ 30 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಲೂಟಿ ಮಾಡಿದ್ದಾರೆ. ಇದಕ್ಕಿಂತ ಮೊದಲು 2001–02ನೇ ಸಾಲಿನಲ್ಲಿ ಕೂಡ ಅಂದೂ ಸಹಿತ ಸಚಿವರ ಗಮನಕ್ಕೆ ಬಂದಿತ್ತು. 30 ಗೃಹ ನಿರ್ಮಾಣ ಸಹಕಾರಿ ಸಂಘಗಳು ಇದೇ ರೀತಿ ರಿಯಾಯಿತಿಯನ್ನು ಕೊಡಲು ಸುಮಾರು 95 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಸರ್ಕಾರದ ಬೊಕ್ಕಸಕ್ಕೆ ಹಾನಿಯನ್ನು ಮಾಡಿದರು ಎಂಬುದನ್ನು ಗಮನಕ್ಕೆ ತಂದರೂ ಸಹಿತ ಇವತ್ತಿನವರೆಗೆ ಕ್ರಮ ತೆಗೆದುಕೊಂಡಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ನಾವು ನೋಡಿದ ಹಾಗೆ ಗೃಹ ನಿರ್ಮಾಣ ಸಹಕಾರಿ ಸಂಘಗಳು ಬೆಂಗಳೂರಿನಲ್ಲಿ ಇದೊಂದು ದೊಡ್ಡ

ರಿಯಲ್ ಎಸ್ಟೇಟ್ ಬಿಸ್‌ನೆಸ್ ಮಾಡುವಂಥ ಕೆಲವೇ ಕೆಲವು ಜನರು ಇದರಲ್ಲಿ ಭಾಗಿಯಾಗಿಕೊಂಡು ಸದಸ್ಯರಿಗಿಂತ ಹೆಚ್ಚಾಗಿ ಒಂದೇ ಮನೆತನದ ಕೆಲವೇ ಕೆಲವು ಜನರು ಸೇರಿಕೊಂಡು ಇದರಲ್ಲಿ ಉದ್ಯೋಗವನ್ನು ಮಾಡಿಕೊಂಡಿದ್ದಾರೆ ಎನ್ನುವಂಥದ್ದು ನಿಮ್ಮೆಲ್ಲರ ಗಮನಕ್ಕೂ ಬಂದಿರಬಹುದು ಎಂದು ನಾನು ಭಾವಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದು ಇನ್ನೊಂದು ಬ್ಲೇಡ್ ಕಂಪನಿ ತರಹನೇ. ಎಷ್ಟೋ ಜನ ಅದರಲ್ಲಿ ದುಡ್ಡು ಕೊಟ್ಟವರಿಗೆ ದುಡ್ಡು ಬರಲಿಲ್ಲ ಸೈಟೂ ಬರಲಿಲ್ಲ. ಅದರ ಬಗ್ಗೆ ಸ್ವಲ್ಪ ಸೀರಿಯಸ್ ಆಗಿ ಗಮನಹರಿಸಬೇಕು.

ಶ್ರೀ ಸಿ.ಎಂ.ಉದಾಸಿ: ಅದನ್ನು ಹೇಳಿದೆ ನಾನು. ಮಾನ್ಯ ದೇಶ್‌ಪಾಂಡೆಯವರು ಇದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ. ಅವರು ಹೊಸದಾಗಿ ಈ ಖಾತೆಗೆ ಬಂದಿರುವುದರಿಂದ ಅವರ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುತ್ತಾರೆ ಎಂಬ ಉದ್ದೇಶದಿಂದಲೇ ಇದನ್ನು ಅವರಿಗೆ ಹೇಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ಎಲ್ಲಾದಕ್ಕಿಂತ ಹೆಚ್ಚಾಗಿ ನಮ್ಮ ಎಲ್.ಹೆಚ್. ನಲ್ಲಿದೆಯಲ್ಲಾ, ಶಾಸಕರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ನಮ್ಮದೆಲ್ಲಾ ಲಕ್ಷಗಟ್ಟಲೆ ಮುಳುಗಿ ಹೋಗಿದೆ. ಅನಾಥರಾಗಿದ್ದೇವೆ, ಮೂರು ನಾಲ್ಕು ವರ್ಷವಾಗಿದೆ ಒಂದೂಕಾಲು ಲಕ್ಷ ರೂ ಕೊಟ್ಟು, ಬಹಳಷ್ಟು ಜನ ಶಾಸಕರದ್ದು ಮುಳುಗಿಸಿದ್ದಾರೆ, ಅವರು ಯಾರಿದ್ದಾರೆ? ಎಲ್ಲಿದ್ದಾರೆ ದಯವಿಟ್ಟು ತನಿಖೆ ನಡೆಸುತ್ತೀರಾ? ಇಡೀ ರಾಜ್ಯವಲ್ಲ, ನಮ್ಮ ಕಾಲಬುಡದಲ್ಲೇ ಇದೆ. ಎಲ್.ಹೆಚ್.ನಲ್ಲಿ ಕೆಲಸ ಮಾಡುವಂಥ ಶಾಸಕರ ಭವನದ ಶಾಸಕರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಇದೆಯಲ್ಲಾ; ಅಲ್ಲಿ ಎಷ್ಟು ಕೋಟಿ ರೂ. ಮುಳುಗಿದೆ? ಎಷ್ಟು ಜನ ಶಾಸಕರನ್ನು ಅನಾಥರನ್ನಾಗಿ ಮಾಡಿದ್ದಾರೆ ದಯವಿಟ್ಟು ವಿಚಾರಣೆ ಮಾಡಿ. ಇವತ್ತಿಗೂ ಕೂಡ ಸೈಟೂ ಇಲ್ಲ, ಹಣವೂ ಇಲ್ಲ. ಅಲ್ಲಿ ಕೆಲಸ ಮಾಡುವಂಥವರು ಪಂಗನಾಮ ಹಾಕಿದ್ದಾರೆ. ದಯವಿಟ್ಟು ಇವರಿಗೆ ಏನು ಮಾಡುತ್ತೀರಿ? ಪೊಲೀಸರಿಗೆ ಇವರನ್ನು ಹ್ಯಾಂಡ್ ಓವರ್ ಮಾಡಿ.

ಶ್ರೀ ಸಿ.ಎಂ.ಉದಾಸಿ: ಇನ್ನು ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ರಾಜ್ಯದಲ್ಲಿ ಸುಮಾರು 2100 ಮಾತ್ರ ಲಾಭದಲ್ಲಿದ್ದಾವೆ, 2628 ಹಾನಿಯನ್ನು ಅನುಭವಿಸುತ್ತಿವೆ ಎನ್ನುವಂಥ ಹೇಳಿಕೆಯನ್ನು ನೀವು ಕೊಟ್ಟಿದ್ದೀರಿ. ಅದು ಸುಮಾರು 85 ರಿಂದ 90 ಕೋಟಿ ರೂಪಾಯಿ ಹಾನಿ ಎಂದು ಅವರ

ಲೆಕ್ಕದಲ್ಲಿ ತೋರಿಸಿದ್ದರೂ ಸಹ ಗ್ಯಾಪಿನ ಲೆಕ್ಕವನ್ನು ಹಿಡಿದರೆ ಇದರ ನಾಲ್ಕುಪಟ್ಟು ಹಾನಿಯನ್ನು ಅವುಗಳು ಅನುಭವಿಸುತ್ತಿದ್ದರೆ ಎನ್ನಬಹುದು. ಗ್ಯಾಪ್ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಆ ಕಾರಣದಿಂದ ಇದರ ನಾಲ್ಕು ಪಟ್ಟು ಹಾನಿಯನ್ನು ಅವು 300 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಈ ಸಹಕಾರಿ ಸಂಘಗಳು ಅನುಭವಿಸುತ್ತಿದ್ದಾವೆ ಎನ್ನುವ ಭಾವನೆ ನನಗೆ ಬರುತ್ತಿದೆ. ಅದಕ್ಕೆ ಇದರ ಬಗ್ಗೆ ಸರಿಯಾದ ರೀತಿಯ ವ್ಯವಸ್ಥೆಯನ್ನು ಮಾಡುತ್ತೀರಿ ಎಂದು ಹೇಳಲು ಇಚ್ಛೆಪಡುತ್ತಿದ್ದೇನೆ. ಈಗಾಗಲೇ ನೋಡಿರಬಹುದು, ಹಾಲು ಉತ್ಪಾದಕರ ಸಹಕಾರ ಸಂಘಗಳು ರಾಜ್ಯದಲ್ಲಿ 7945 ಇದೆಯೆಂದು ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಆ ಹೇಳಿಕೆಯಲ್ಲಿ ಉತ್ತರ ಕೊಟ್ಟಿರುವುದನ್ನು ನೋಡಿದಾಗ ಅದು ಇಡೀ ರಾಜ್ಯದಲ್ಲಿ ಉತ್ತಮವಾದಂಥ ಕೆಲಸ ಮಾಡುವಂಥ ಸಂಸ್ಥೆಯಾಗಿ ಬೆಳೆಯಬೇಕಾಗಿದೆ. ಹದಿಮೂರು ಯೂನಿಯನ್‌ಗಳಲ್ಲಿ ಐದಾರು ಯೂನಿಯನ್‌ಗಳು ಇವತ್ತು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದು ಸಾಕಷ್ಟು ಲಾಭವನ್ನು ಗಳಿಸುತ್ತಿಲ್ಲ ಎಂಬ ಪರಿಸ್ಥಿತಿ ಇದ್ದರೂ ಸಹ ಇದಕ್ಕೆ ಒಂದು ಕಾಯಕಲ್ಪವನ್ನು ಕೊಡಬೇಕಾಗಿದೆ. ಗುಜರಾತ್ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಸಹ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಬೇಕಾಗಿರುವಂಥ ಉತ್ತಮವಾದಂಥ ಸಂಸ್ಥೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಲು ಇವತ್ತಿಗೂ ಸಾಧ್ಯತೆ ಇದೆ. ಸ್ವಲ್ಪ ಅಲಕ್ಷ್ಯ ಮಾಡಿದರೂ ಸಹ ಉಳಿದ ಸಹಕಾರಿ ಸಂಘಗಳ ಸಾಲಿನಲ್ಲಿ ಇದು ಬರಬಹುದು. ಅದು ಆಗಬಾರದು ಎನ್ನುವುದಾದರೆ ಈಗಿನಿಂದಲೇ ಎಲ್ಲಾ ಕಡೆಗಳಿಗೆ ಸಹಕಾರಿ ಸಂಘಗಳಿಗೆ ಬೇಕಾಗಿರುವಂಥ ಹಣವನ್ನು ಕೊಡಬೇಕಾಗಿದೆಯಲ್ಲಾ ಅದನ್ನು ಕೊಡಿ. ನಮ್ಮ ಕೆ.ಎಂ.ಎಫ್. ಧಾರವಾಡದ ಯೂನಿಯನ್‌ಗೆ ಕೊಡಬೇಕಾಗಿರುವ ಐದು ಕೋಟಿ ರೂಪಾಯಿಗಳಷ್ಟು ಹಣವನ್ನು ಎನ್.ಡಿ.ಡಿ.ಬಿ. ಯಿಂದ ಕೊಡಿಸಬೇಕೆಂದು ಹೇಳಿದಾಗಲೂ ನೀವು ಇದುವರೆಗೆ ಕೊಡಿಸಿಲ್ಲ. ಅವರು ಇತ್ತೀಚೆಗೆ ಲಾಭ ಮಾಡಲು ಹತ್ತಿದ್ದಾರೆ. ಯಾವಾಗ ಅಂದರೆ ಹಾಲಿನ ಪುಡಿಯನ್ನು ತಯಾರು ಮಾಡಲು ಹತ್ತಿದಮೇಲೆ. ಅದಕ್ಕೆ ಬೇಕಾಗಿರುವಂಥ ಹಣಕಾಸಿನ ನೆರವನ್ನು ಕೊಟ್ಟಿದ್ದೇ ಆದರೆ ಅದು ಲಾಭ ಮಾಡಿದರೆ ಇನ್‌ಟರ್ನ್ ಪ್ರತಿಯೊಂದು ಹಾಲು ಉತ್ಪಾದಕರಿಗೂ ಅದರ ಲಾಭ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ಸಂಸ್ಕರಣೆ ಘಟಕಗಳು ಎನ್ನುವ ದೃಷ್ಟಿಯೊಳಗೆ ಸಕ್ಕರೆ ಕಾರ್ಖಾನೆ ಮತ್ತು

ನೂಲಿನ ಕಾರ್ಖಾನೆಗಳು ಇವತ್ತು ಹಾನಿಯನ್ನು ಅನುಭವಿಸುತ್ತಿರುವುದನ್ನು ನೋಡುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹಾಲಿನದ್ದು ಸರ್ಕಾರಿ ಸಹಾಯ ಬೇಡ, ಅಟಾನಮಿ ಬೇಕು ಎಂದು ನಾವೇ ಎಲ್ಲಾ ಹೋರಾಟ ಮಾಡಿ ತೆಗೆದುಕೊಂಡಿರುವವರು. ಸರ್ಕಾರ ಇಂಟರ್‌ಫಿಯರೆನ್ಸ್ ಜಾಸ್ತಿಯಾಗಿ ಇವತ್ತು ಹಾಲಿನ ಧಾರಣೆ ಕಡಿಮೆಯಾಗಿದೆ. ತಾವು ರೇಟ್ ಫಿಕ್ಸ್ ಮಾಡುವುದನ್ನು ಇಡೀ ಸ್ಟೇಟ್‌ಗೆ ಒಂದಾಗಿ ಇಟ್ಟುಕೊಂಡು ಗೌರ್ನಮೆಂಟೇ ಮಾಡಬೇಕು ಎಂಬ ನಿಲುವನ್ನು ಬದಲಾಯಿಸಬೇಕು. ಪ್ರಕ್ಯೂರ್‌ಮೆಂಟ್ ಮತ್ತು ಸೇಲ್ಸ್ ಹಾಗೆಯೇ ಮಾಡಬೇಕು. ಈಗ two axis ಇದೆ ಮಹಾರಾಷ್ಟ್ರ two axis ಇದೆ ಆಂಧ್ರ, ಅವರ ಜೊತೆ ಕಾಂಪಿಟ್ ಮಾಡಲು ಆಗದೆ ಹಾಲಿನ ಸ್ಥಿತಿ ಇಲ್ಲಿಗೆ ಬಂದಿದೆ. ನಾನು ಇವರಲ್ಲಿ ಬೇಡಿಕೊಳ್ಳುತ್ತೇನೆ. ಅವರಿಗೆ ನೀವು autonomy ಕೊಡಬೇಕು. ಧಾರಣೆ ನಿಗದಿ ಮಾಡುವ ಅಧಿಕಾರ ಅವರಿಗೆ ಕೊಡಬೇಕು, procurement price ನಿಗದಿ ಮಾಡುವ ಅಧಿಕಾರ ಅವರಿಗೆ ಕೊಡಬೇಕು, Sales price ನಿಗದಿ ಮಾಡುವ ಅಧಿಕಾರವನ್ನು unionಗಳಿಗೆ ಕೊಟ್ಟರೆ ಅವರವರ ಕಾಲ ಮೇಲೆ ಅವರು ನಿಲ್ಲುತ್ತಾರೆ.

ಶ್ರೀ ಸಿ.ಎಂ.ಉದಾಸಿ: ಈಗ ನೂಲಿನ ಗಿರಣಿಗಳು ಕರ್ನಾಟಕ ರಾಜ್ಯದಲ್ಲಿ.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ರಾಜ್ಯಗಳ ಹಾಲನ್ನು ನಮ್ಮಲ್ಲಿ ಮಾರಾಟ ಮಾಡಲು ಅನುಮತಿ ಕೊಟ್ಟಿದ್ದಾರೆ. ಇದರ ಪರಿಣಾಮ ಏನಾಗಿದೆ ಎಂದರೆ, ನಮ್ಮ ರಾಜ್ಯದಲ್ಲಿ ನಾವು ಉತ್ಪಾದನೆ ಮಾಡತಕ್ಕಂಥ ಹಾಲಿಗೆ ಮಾರ್ಕೆಟ್ ಇಲ್ಲದೆ ಇವತ್ತು ಬೆಲೆ ಕುಸಿಯುತ್ತಿದೆ. ಇವತ್ತು ನಮ್ಮ ಹಾಲು ಉತ್ಪಾದಕರು ಸಮಸ್ಯೆಗಳನ್ನು ಎದುರಿಸುತ್ತಿರಬೇಕಾದರೆ, ಬೇರೆ ಬೇರೆ ರಾಜ್ಯಗಳ ಕಂಪೆನಿಗಳು, ಬೇರೆ ಬೇರೆ ರಾಜ್ಯಗಳಿಂದ ಹಾಲನ್ನು ತೆಗೆದುಕೊಂಡು ಬಂದು ಇಲ್ಲಿ ಮಾರಾಟ ಮಾಡುವುದಕ್ಕೆ ನೀವು ಅನುಮತಿ ಕೊಟ್ಟಿದ್ದೀರಿ. ಅದನ್ನು ತಡೆ ಹಿಡಿಯದಿದ್ದರೆ ನಮ್ಮ ಹಾಲನ್ನು.......

ಶ್ರೀ ಸಿ.ಎಂ.ಉದಾಸಿ: ಅದನ್ನು ತಡೆಯುವುದಕ್ಕಾಗುವುದಿಲ್ಲ. ನಮ್ಮ ಹಾಲು ಹೊರಗೆ ಹೋಗದಂತಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಾಗಾದರೆ ನಮಗೆ ಪರ್ಮಿಷನ್ ಕೊಡಿ.

ಶ್ರೀ ಸಿ.ಎಂ.ಉದಾಸಿ: 12 ನೂಲಿನ ಗಿರಣಿಗಳಲ್ಲಿ 10 ನೂಲಿನ ಗಿರಣಿಗಳ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನೂಲಿನ ಗಿರಣಿಗಳು ಯಾವ ಉದ್ದೇಶದಿಂದ ಪ್ರಾರಂಭ ಮಾಡಿದರು? ರೈತರಿಂದ ಹತ್ತಿ ಖರೀದಿ ಮಾಡಿ, ನೂಲು ತಯಾರು ಮಾಡಿ, ಅದನ್ನು ಮಾರಾಟ ಮಾಡಬೇಕಾದಂತಹ ವ್ಯವಸ್ಥೆ ಏನಾಗಬೇಕಾಗಿತ್ತೋ, ಆ ವ್ಯವಸ್ಥೆಯನ್ನು ಮಾಡದೆ, ವ್ಯಾಪಾರಸ್ಥರಿಂದ ಹತ್ತಿ ಖರೀದಿ ಮಾಡಿ ನೂಲು ಮಾಡುವಂತಹ ವ್ಯವಸ್ಥೆ ಬಂದಿದ್ದರ ಪರಿಣಾಮ, ಇವತ್ತು ನಾವು ಹಾನಿಯನ್ನು ಅನುಭವಿಸುತ್ತಿದ್ದೇವೆ. ಒಂದು ವೇಳೆ ಕಾರ್ಖಾನೆಗಳಿಂದ ಹಾನಿ ಆಗಿದ್ದರೂ ಸಹಿತ, ರೈತರಿಗೇನಾದರೂ ಲಾಭವಾಗುತ್ತಿದ್ದರೆ, ಆ ಪ್ರಶ್ನೆ ಬೇರೆ ಇತ್ತು. ಇವತ್ತು ರೈತರಿಗೂ ಕೂಡ ಲಾಭ ಸಿಕ್ಕಿಲ್ಲ. ಇವತ್ತು ಕಾರ್ಖಾನೆಗಳನ್ನು ನಡೆಸಿ ಹಾನಿಯನ್ನು ಮಾಡಿದ್ದಾರೆ. ಈ ಹಾನಿಗೆ ಕಾರಣಗಳು ಅನೇಕವಿದೆ. ಇದರ ಆಡಳಿತದಲ್ಲಿ ಆಗಿರುವಂತಹ ಅವ್ಯವಸ್ಥೆ ಅಲ್ಲಿನ ಆಡಳಿತಾಧಿಕಾರಿಗಳ ಅವ್ಯವಸ್ಥೆ ಅಲ್ಲಿ ಆಗಲು ಕಾರಣವಾಗಿದೆ. ಯಾರು ಇದರಲ್ಲಿ ಪರಿಣತಿಯನ್ನು ಪಡೆದಿರುತ್ತಾರೋ ಅಥವಾ ಅವ್ಯವಸ್ಥೆ ಮತ್ತು ಅಲ್ಲಿಗೆ ತರಬೇತಿ ಇಲ್ಲದಂತಿಹ ಎಂ.ಡಿ.ಗಳನ್ನು ಹಾಕುವುದರಿಂದ ಈ ರೀತಿಯ ಎಂ.ಬಿ.ಎ.ನಲ್ಲಿ ತರಬೇತಿ ಪಡೆದಿರುತ್ತಾರೋ, ಅಂತಹವರನ್ನು ಏನಾದರೂ ನೀವು ಅಲ್ಲಿಗೆ ಎಂ.ಡಿ.ಗಳಾಗಿ ನೇಮಕ ಮಾಡುತ್ತಿದ್ದರೆ, ಅಡ್ಡಿ ಏನೂ ಇಲ್ಲ. ಆದರೆ ನೀವು ಅಲ್ಲಿಗೆ Joint Registrar ಗಳನ್ನು ಹಾಕುತ್ತಿದ್ದೀರಿ. ಇದರಿಂದ ಏನಾಗಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಅದೊಂದು no profit, no loss ನಲ್ಲಿ ನಡೆಯುತ್ತಿರಬಹುದು ಎಂಬ ಭಾವನೆ ನನ್ನಲ್ಲಿತ್ತು. ಇವತ್ತು ಅದೂ ಸಹಿತ 4 ಕೋಟಿ ರೂಪಯಿಗಳ ಹಾನಿಯನ್ನು ಅನುಭವಿಸುತ್ತಿದೆ. ರಾಣೆಬೆನ್ನೂರಿನ ರೈತರ ಸಹಕಾರಿ ನೂಲಿನ ಗಿರಣಿ 49.46 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ. ಸವದತ್ತಿಯ ಮಲಪ್ರಭಾ ಸಹಕಾರಿ ನೂಲಿನ ಗಿರಣಿ 36 ಕೋಟಿ ರೂಪಾಯಿಗಳು, ಅಣ್ಣಿಗೇರಿಯ ವೆಂಕಟೇಶ ಸಹಕಾರಿ ನೂಲಿನ ಗಿರಣಿ 37 ಕೋಟಿ ರೂಪಾಯಿಗಳು, ಬೆಳಗಾವಿ ಸಹಕಾರಿ ನೂಲಿನ ಗಿರಣಿ 23 ಕೋಟಿ ರೂಪಾಯಿಗಳು, ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ 23 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿವೆ. ಇವತ್ತು ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದಲ್ಲಿ, ಇವುಗಳು ಹಾನಿಯನ್ನು ಅನುಭವಿಸುತ್ತಿರಲಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಮಾನ್ಯ ಡಿ.ಆರ್.ಪಾಟೀಲರು ಮೊನ್ನೆ ಮಾತನಾಡುತ್ತಾ

ಒಂದು ಮಾತನ್ನು ಹೇಳಿದರು. ಒಂದು ಕೆ.ಜಿ. ನೂಲನ್ನು ಉತ್ಪಾದನೆ ಮಾಡಬೇಕಾದರೆ 4 ಯೂನಿಟ್ ವಿದ್ಯುತ್ ಬೇಕಾಗುತ್ತದೆ. ಇಲ್ಲಿ ಮಾರುಕಟ್ಟೆ ಬೆಲೆ, ತಮಿಳುನಾಡಿಗೂ ಇಲ್ಲಿಗೂ ಹೋಲಿಸಿ ನೋಡಿದಾಗ, 6 ರೂಪಾಯಿಗಳ ವಿದ್ಯುತ್ತಿನ ಬೆಲೆಯಲ್ಲೇ ವ್ಯತ್ಯಾಸವಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿದರು. 6 ರೂಪಾಯಿಗಳು cost of production ನಲ್ಲಿ ಹೆಚ್ಚಿಗೆ ಆಗುತ್ತಿರಬೇಕಾದರೆ, ತಮಿಳುನಾಡಿನವರ ಜೊತೆಯಲ್ಲಿ ಹೇಗೆ ನಾವು competition ಮಾಡಲಿಕ್ಕೆ ಸಾಧ್ಯವಾಗುತ್ತದೆ? ಎಲ್ಲಿ ಸೆಂಟ್ ಪರ್ಸೆಂಟ್ ಉತ್ಪಾದನೆ ಮಾಡಬೇಕಾಗಿದೆಯೋ, ಅದರಲ್ಲಿ 25–30 ಪರ್ಸೆಂಟ್ ಪ್ರೊಡಕ್ಷನ್ ಮಾಡಿ, ನಾಮಾಕಾವಸ್ಥೆ ಆ ಮಿಲ್‌ಗಳನ್ನು ನಡೆಸಿದ್ದಾರೆ, ಹೇಗೆ ಹಾನಿಗೊಳಗಾಗದೆ ಇರುತ್ತವೆ? ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಕೆಲವೇ ಕೆಲವು ಜನ ಪಟ್ಟಭದ್ರಹಿತಾಸಕ್ತಿಗಳಿಗೆ ಬೇಕಾಗುವಂತಹ ವ್ಯವಸ್ಥೆಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ಇಲ್ಲಿ ತರಲಿಕ್ಕೆ ಇಚ್ಛೆಪಡುತ್ತೇನೆ. ಅದಕ್ಕಾಗಿ ಇದರ ಬಗ್ಗೆ ಕಾಯಕಲ್ಪ ಕೊಡಬೇಕು. ಇದನ್ನು ಆಧುನೀಕರಣ ಮಾಡಬೇಕಾಗಿದೆ. ತಮಗೆಲ್ಲಾ ಗೊತ್ತಿರುವ ಹಾಗೆ, Tata consultancy ನವರು ಇದರ ಬಗ್ಗೆ ವರದಿಯೊಂದನ್ನು ಕೊಟ್ಟಿದ್ದಾರೆ. ಆ ವರದಿಯ ಆಧಾರದ ಮೇಲೆ, ಏನಾದರೂ ಸುಧಾರಣೆ ಮಾಡಲು ಸಾಧ್ಯವಿದ್ದರೆ, ಅದನ್ನಾದರೂ ತಾವು ಮಾಡಬೇಕಾಗುತ್ತದೆ. ಇನ್ನು ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ಇವುಗಳ ಬಗ್ಗೆ ಅನೇಕ ಸಲ ನಾವು ನಿಮ್ಮ ಗಮನಕ್ಕೆ ತಂದಿದ್ದೇವೆ. ಈಗಾಗಲೇ ತಾವು ಏಳು ಸಕ್ಕರೆ ಕಾರ್ಖಾನೆಗಳನ್ನು ಬಂದ್ ಮಾಡಬೇಕು ಅನ್ನುವಂತಹ ತೀರ್ಮಾನಕ್ಕೆ ಬಂದಿದ್ದೀರಿ. ಆ ಏಳು ಸಕ್ಕರೆ ಕಾರ್ಖಾನೆಗಳನ್ನು ಬಂದ್ ಮಾಡುವುದರ ಬದಲಾಗಿ, ಬಂದ್ ಆಗುವಂತಹ ಪರಿಸ್ಥಿತಿ ನಿರ್ಮಾಣವಾಗಲಿಕ್ಕೆ ಕಾರಣವೇನು ಎನ್ನುವುದನ್ನು ನೀವು ಆಲೋಚನೆ ಮಾಡಬೇಕಾಗಿದೆ. 1998–99ನೇ ಇಸವಿಯಿಂದ ಸಕ್ಕರೆ ಮಾರುಕಟ್ಟೆ ಬೆಲೆಗೆ ಮತ್ತು ಕಬ್ಬಿನ ಬೆಲೆಗಳಿಗೆ ಆಗಿರುವಂತಹ ವ್ಯತ್ಯಾಸಗಳನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು. 1200–1300 ರೂಪಾಯಿಗಳು ಇದ್ದಂತಹ ಸಕ್ಕರೆಯ ಮಾರುಕಟ್ಟೆ ಬೆಲೆ 1000–1100 ರೂಪಾಯಿಗಳಿಗೆ ಬಂದಾಗ, ಕಬ್ಬಿಗೆ ನೀವು ಬೆಲೆಯನ್ನು ನಿರ್ಧಾರ ಮಾಡಿಸಿದಾಗ, 800–850 ರೂಪಾಯಿಗಳ ಬೆಲೆಯನ್ನು ಕೊಡಬೇಕಾಗಿತ್ತು. ಮಾನ್ಯ ಸಚಿವರು ದಯವಿಟ್ಟು ಇದನ್ನು

ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. 800–850 ರೂಪಾಯಿಗಳು ಕಬ್ಬಿನ ಬೆಲೆ ಇರಬೇಕಾದಾಗ, 1200–1300 ರೂಪಾಯಿಗಳು ಇದ್ದಂತಹ ಸಕ್ಕರೆ ಬೆಲೆ, 1100 ರೂಪಾಯಿಗಳಿಗೆ ಬಂದಿದ್ದೇ ಆದರೆ, ಅದರ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಯಾರೂ ಆಲೋಚನೆ ಮಾಡಲಿಲ್ಲ. ಯಾವಾಗಲೂ ಕಬ್ಬಿನ ಬೆಲೆಯನ್ನು ನಿಗದಿಗೊಳಿಸಬೇಕಾದಾಗ, realisation ಬಗ್ಗೆಯೂ ಸಹಿತ ಅಷ್ಟೇ ಗಮನ ಹರಿಸಬೇಕಾಗಿತ್ತು. ಕಬ್ಬಿನಿಂದ ನುರಿಸಿದಾಗ ಬರಬೇಕಾದಂತಹ ಸಕ್ಕರೆ, ಸಕ್ಕರೆ ಮಾರಾಟದಿಂದ ಬರಬೇಕಾದಂತಹ ಹಣ ಮತ್ತು ಮೊಲಾಸಿಸ್ ಮಾರಾಟದಿಂದ ಬರಬೇಕಾದಂತಹ realisation ಹಣ ಇವತ್ತು ಕಬ್ಬು ಕೊಟ್ಟವರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ಹೇಗೆ ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. ಇವತ್ತು ತಮ್ಮ ಹತ್ತಿರ ಅಧಿಕಾರ ಇದೆ. ಯಾವುದೇ ಕಾರಣಕ್ಕೂ ಸಹಿತ, ಇವತ್ತು ಬೆಲೆ ನಿಯಂತ್ರಣ ಮಾಡುವುದರ ಸಲುವಾಗಿ release mechanism system ಇದೆ. ಆ release mechanism system ಉಪಯೋಗ ಮಾಡಬೇಕಾದುದ್ದನ್ನು, ಸರಿಯಾದ ರೀತಿಯಲ್ಲಿ ಉಪಯೋಗ ಮಾಡಲಿಲ್ಲ. ಅದೇ ಸಂದರ್ಭದಲ್ಲಿ 25 ಲಕ್ಷಕ್ಕಿಂತ ಹೆಚ್ಚು ಟನ್ ಸಕ್ಕರೆಯನ್ನು ವಿದೇಶದಿಂದ ಆಮದು ಮಾಡಿಕೊಂಡರು. ಆ ಆಮದು ಮಾಡಿಕೊಂಡ ಪರಿಣಾಮ ಏನಾಯಿತು ಎಂದರೆ, ಬೆಲೆ ಕುಸಿದು ಬಿತ್ತು. ಆ ಬೆಲೆ ಕುಸಿದಿದ್ದರಿಂದ ಏನಾಯಿತು ಎಂದರೆ, ಸಕ್ಕರೆ ಕಾರ್ಖಾನೆಗಳಿಗೆ 1998–99 ರಿಂದ ಹಾನಿಯಾಗುತ್ತಾ ಬಂದವು. ಇವತ್ತು ಸಕ್ಕರೆ ಬೆಲೆ ಹೆಚ್ಚಾಗಿದೆ. ಆದರೆ ಕಬ್ಬಿನ ಉತ್ಪತ್ತಿ ಕಡಿಮೆಯಾಗಿದೆ. ಕಾರ್ಖಾನೆಗಳು ಕಬ್ಬು ಬೆಳೆಸುವುದರಲ್ಲಿ ನಿರಾಸಕ್ತಿ ಮೂಡಿಸಿದೆ. ಆದರೆ ಇವತ್ತು ಸಕ್ಕರೆ ಉದ್ಯಮ ಹಾಳಾಗಿಲ್ಲ. ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಸಕ್ಕರೆ ಉದ್ಯಮ ಸರಿಯಾಗಿದೆ. ಆದರೆ ಸಕ್ಕರೆ ಸಹಕಾರಿ ರಂಗದ ಉದ್ದಿಮೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕಾದಂತಹ ವಿಚಾರದಲ್ಲಿ, ಇಲ್ಲಿಯೂ ಸಹಿತ ತಾವು ಎಂ.ಡಿ.ಗಳನ್ನು ಹಾಕಬೇಕಾದಾಗ ಸರಿಯಾದ ಜನರನ್ನು ಹಾಕಲಿಕ್ಕಾಗಲಿಲ್ಲ. ಯಾರಿಗೆ training ಆಗಿತ್ತೋ,ಅಂತಹವರನ್ನು ಅಲ್ಲಿಗೆ ಹಾಕಬೇಕಾಗಿತ್ತು. ಮಹಾರಾಷ್ಟ್ರದಲ್ಲಿ ಹೇಗಿದೆ ಎಂದರೆ, trained MD ಗಳು ಯಾರ್‍ಯಾರು ಎಂಬುದರ ಬಗ್ಗೆ, trained Joint Registrarಗಳ panel list ಒಂದಿದೆ.ಅಂತಹ ಅಧಿಕಾರಿಗಳ ಲಿಸ್ಟೊಂದಿದೆ. ಆ Director of Sugar ನವರು ಆ panel ನಲ್ಲಿ ಇದ್ದವರನ್ನೇ ಹಾಕಬೇಕೆಂದು

ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಹಾಗಿಲ್ಲ. ಯಾರು ಬೇಕಾದರೂ ಎಂ.ಡಿ.ಆಗಬಹುದು. ಬೇಕಾದಾಗ ಎಂ.ಡಿ.ಆಗಬಹುದು, ಬೇಡವಾದಾಗ ಇಲ್ಲವೇ ಇಲ್ಲ. ಅವರು ಎಂ.ಡಿ.ಆಗಿದ್ದಾಗ ತರಬೇತಿ ಪಡೆದುಕೊಂಡು ಬಂದಿದ್ದರ ಉಪಯೋಗ ಸಹಿತ ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಹೋಗಬೇಕಾಗಿದೆ. ತಮ್ಮ ಗಮನಕ್ಕೆ ತರುವುದಾದರೆ, ಈಗ ಕರ್ನಾಟಕ ರಾಜ್ಯದಲ್ಲಿ ಇರುವಂತಹ 21 ಸಕ್ಕರೆ ಕಾರ್ಖಾನೆಗಳಲ್ಲಿ 18 ಹಾನಿಯನ್ನು ಅನುಭವಿಸುತ್ತಿವೆ. ಮೂರು ಕಾರ್ಖಾನೆಗಳು ಮಾತ್ರ ಸ್ವಲ್ಪ ಮಟ್ಟಿನ ಲಾಭವನ್ನು ಗಳಿಸುತ್ತಿವೆ. ದೂದುಗಂಗಾ, ಹಾಲು ಸಿದ್ಧನಾಥ ಮತ್ತು ನಂದಿ, ಈ ಮೂರು ಕಾರ್ಖಾನೆಗಳನ್ನು ಹೊರತುಪಡಿಸಿದರೆ, ಉಳಿದೆಲ್ಲಾ ನಷ್ಟದಲ್ಲಿವೆ. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ 33 ಕೋಟಿ ರೂ, ಭಾಗ್ಯಲಕ್ಷ್ಮಿ 87 ಕೋಟಿ ರೂ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ 41 ಕೋಟಿ ರೂ, ದಕ್ಷಿಣ ಕನ್ನಡ 46 ಕೋಟಿ ರೂ, ಘಟಪ್ರಭಾ 46 ಕೋಟಿ ರೂ, ಹೇಮಾವತಿ 6 ಕೋಟಿ ರೂ, ಹಿರಣ್ಯಕೇಶಿ 7 ಕೋಟಿ ರೂ, ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ 37 ಕೋಟಿ ರೂ, ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ 16 ಕೋಟಿ ರೂ, ಮಲಪ್ರಭಾ ಸಕ್ಕರೆ ಕಾರ್ಖಾನೆ 18 ಕೋಟಿ ರೂ, ಮಹಾತ್ಮಾ ಗಾಂಧಿ 11 ಕೋಟಿ ರೂ, ಪಾಂಡವಪುರ ಕಾರ್ಖಾನೆ 120 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿವೆ. ಪಾಂಡವಪುರ ಕಾರ್ಖಾನೆಯಲ್ಲೇ 1 ಲಕ್ಷ ಟನ್ ಕಬ್ಬು ಅರೆಯುವುದಕ್ಕಾಗುವುದಿಲ್ಲ. ಆದರೆ ಅದರ ಸಮೀಪದಲ್ಲಿರುವಂತಹ ಖಾಸಗಿ ಕಾರ್ಖಾನೆ 12-14 ಲಕ್ಷ ಟನ್ ಕಬ್ಬು ಅರೆಯುತ್ತದೆ. ಅವರಿಗೆ ಲಾಭ ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ? ಅವರು ಕಬ್ಬಿನಿಂದ ಸಕ್ಕರೆ ಮಾಡುವುದರ ಜೊತೆಗೆ, ಬಗಸ್‌ನಿಂದ ವಿದ್ಯುತ್ ಅನ್ನು ಉತ್ಪಾದನೆ ಮಾಡುತ್ತಾರೆ ಮತ್ತು ಮೊಲಾಸಿಸ್‌ನಿಂದ ಡಿಸ್ಟಿಲರಿ ಮಾಡಿ ಇವತ್ತು ಎಥೆನಾಲ್ ಅನ್ನು ಉತ್ಪಾದನೆ ಮಾಡುತ್ತಾರೆ. ಯಾವಾಗ ಈ ಖಾಸಗಿ ಕಾರ್ಖಾನೆ ಮತ್ತು ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳು ಎರಡೂ ಸರಿಯಾದ ದೃಷ್ಟಿಯಿಂದ reliasation ಕಡಿಮೆ ಇದ್ದರೆ, ಲಾಭವನ್ನು ಮಾಡಲಿಕ್ಕೆ ಸಾಧ್ಯವೇ ಆಗುವುದಿಲ್ಲ. ಇವರಿಗೆ 120 ಕೋಟಿ ರೂಪಾಯಿಗಳ ಹಾನಿಯಾಗುತ್ತದೆ. ಅವರು ಇಷ್ಟು ದಿವಸಗಳಲ್ಲಿ 120 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಲಾಭವನ್ನು ಮಾಡಿರಬಹುದು. ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆಗೂ ಖಾಸಗಿಯವರಿಗೂ ಅಂತರ ಜಾಸ್ತಿ ಇಲ್ಲ. ಸಕ್ಕರೆ ಉದ್ದಿಮೆ ಹಾಳಾಗಿಲ್ಲ. ಆದರೆ ಸಕ್ಕರೆ ಉದ್ದಿಮೆಯನ್ನು ನಡೆಸಬೇಕಾದಂತಹ

ದೃಷ್ಟಿಯಲ್ಲಿ ಇರಬೇಕಾದಂತಹ ವ್ಯವಸ್ಥೆಯ ಕೊರತೆ ಏನಿದೆ, ಆ ದೂರದೃಷ್ಟಿಯ ಕೊರತೆಯ ಪರಿಣಾಮವಾಗಿ ಇವತ್ತು ಎಲ್ಲಾ ಕಾರ್ಖಾನೆಗಳು ಹಾನಿಯನ್ನು ಅನುಭವಿಸಬೇಕಾದಂತಹ ಪರಿಸ್ಥಿತಿಗೆ ಬಂದಿವೆ. ಇದನ್ನು ಇವತ್ತು ನೀವು ಗಂಭೀರವಾಗಿ ಆಲೋಚನೆ ಮಾಡದಿದ್ದರೆ, ಇವತ್ತು ಈ ಉದ್ಯಮ ಬಂದ್ ಆಗಿದ್ದೇ ಆದರೆ, ಮುಂದೊಂದು ದಿವಸ ಖಾಸಗಿಯವರ ಕೈಯಲ್ಲಿ ಈ ಉದ್ಯಮವು ಸಿಕ್ಕಿಕೊಂಡು, ಮತ್ತೆ ರೈತರ ಶೋಷಣೆಗೆ ದಾರಿಯಾಗುತ್ತದೆ. ಸಹಕಾರಿ ರಂಗದಲ್ಲಿ ಸಹಿತ ಸ್ಪರ್ಧೆಯಲ್ಲಿ ಇರಲೇಬೇಕು. ರೈತರನ್ನು ರಕ್ಷಣೆ ಮಾಡುವುದರ ಸಲುವಾಗಿ ಆ ಕಾರ್ಖಾನೆಗಳು ಇರದಿದ್ದರೆ, ಸಮಸ್ಯೆಯಾಗುತ್ತದೆ. ಈ ರಕ್ಷಣೆಗೆ ಬರಬೇಕು ಅನ್ನುವಂತಹ ವಿಚಾರದಲ್ಲಿ ತಾವೇನಾದರೂ ಮಾಡಬೇಕು. ಬ್ರಹ್ಮಾವರ ಕಾರ್ಖಾನೆಗೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹಾವೇರಿ ಸಕ್ಕರೆ ಕಾರ್ಖಾನೆಗೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ಕೊಡುವುದಿದ್ದರೆ, 15–20 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟು, ಕನಿಷ್ಟ ಎರಡು ಲಕ್ಷ ಟನ್ ಕಬ್ಬು ಅರೆಯಬೇಕಾದಂತಹ ವ್ಯವಸ್ಥೆಯನ್ನು ಮಾಡಬೇಕು. 2 ಲಕ್ಷ ಟನ್‌ಗಿಂತ ಕಡಿಮೆ ಕಬ್ಬು ಅರೆಯುವಂತಹ ಯಾವುದೇ ಕಾರ್ಖಾನೆ ಲಾಭದಾಯಕವಾಗಿ ನಡೆಯಲಿಕ್ಕೆ ಸಾಧ್ಯವೇ ಇಲ್ಲ. ಆ ಕಾರಣದಿಂದ, ಅದಕ್ಕೆ ಪೂರಕವಾದಂತಹ ವ್ಯವಸ್ಥೆಗಳನ್ನು ಮಾಡಬೇಕು. ಜೊತೆ ಜೊತೆಗೆ ಇವತ್ತು ಕೋ–ಜನರೇಷನ್ ಮತ್ತು ಮೊಲಾಸಿಸ್‌ನಿಮದ ಡಿಸ್ಟಿಲರಿ ಮಾಡುವಂತಹ ವ್ಯವಸ್ಥೆ ಮಾಡದೆ ಈ ಕಾರ್ಖಾನೆಗಳನ್ನು ನಡೆಸುವುದಕ್ಕೆ ಹಣಕಾಸಿನ ನೆರವನ್ನು ಕೊಡಲಿಕ್ಕೆ ಹೋಗುವುದು, ಎಷ್ಟರಮಟ್ಟಿಗೆ ಸಮಂಜಸ ಎನ್ನುವುದರ ಬಗ್ಗೆ ತಾವು ಆಲೋಚನೆ ಮಾಡುತ್ತೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಇವತ್ತು ಎಣ್ಣೆ ಗಿರಣಿಗಳ ಬಗ್ಗೆ ಹೇಳಬೇಕೆಂದರೆ, ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ಮಾತ್ರ ಲಾಭದಲ್ಲಿ ಇದೆ. ಪ್ರಾದೇಶಿಕ ಎಣ್ಣೆ ಬೀಜಗಳ ಸಹಕಾರ ಸಂಘ ಮಾತ್ರ ಲಾಭದಲ್ಲಿ ಇದೆ. ಉಳಿದ ಎಲ್ಲಾ ಎಣ್ಣೆಮಿಲ್‌ಗಳು ಇವತ್ತು ಹಾನಿಯಲ್ಲಿವೆ ಎನ್ನುವುದು ತಮಗೆ ಗೊತ್ತಿದೆ. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನರಗುಂದ ಆಗಲಿ, ಗದಗ್ ಕೋ–ಆಪರೇಟಿವ್ ಆಯಿಲ್ ಮಿಲ್ ಆಗಲಿ ಇವೆಲ್ಲಾ ಹಾನಿಯನ್ನು ಅನುಭವಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಇಂತಹ ಸಂದರ್ಭದಲ್ಲಿ ತಾವು ಈ ಸಂಘಗಳ ಪುನಶ್ಚೇತನದ

ಕೆಲಸವನ್ನು ಯಾವ ರೀತಿ ಮಾಡುತ್ತೀರಿ ಎಂಬುದನ್ನು ನೋಡಬೇಕಾಗಿದೆ. ಒಳನಾಡು ಮೀನುಗಾರಿಕೆ ಸಹಕಾರಿ ಸಂಘಗಳು ಸುಮಾರು ಹತ್ತಕ್ಕಿಂತ ಹೆಚ್ಚು ಸಹಕಾರಿ ಸಂಘಗಳು ಇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉದಾಸಿಯವರೆ, ಒಂದು ನಿಮಿಷ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಾನಿಯಾಗಿವೆ, ನಷ್ಟದಲ್ಲಿವೆ ಎಂದು ಇಷ್ಟೇ ಹೇಳುತ್ತೀರಿ, ಏಕೆ ಹಾನಿಯಾದವು ಮತ್ತು ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ತಮ್ಮ ಸಲಹೆ ಏನು? ನೀವು ಆ ಸಲಹೆಗಳನ್ನೇ ಹೇಳುತ್ತಿಲ್ಲ. ಪುನಶ್ಚೇತನದ ಬಗ್ಗೆ ಒಂದಕ್ಕೂ ನೀವು ಸಲಹೆ ಮಾಡಲಿಲ್ಲ. ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳಿದಿರಿ, ಉಳಿದವು ಯಾವ ರೀತಿ ಪುನಶ್ಚೇತನ ಮಾಡಬೇಕೆಂದು ತಾವು ಹೇಳಬೇಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಎಸ್.ಎಸ್.ಪಾಟೀಟಜಿರು ಮುಂದೆ ಸಕ್ಕರೆ ಕಾರ್ಖಾನೆ ಮಾಡುವವರಿದ್ದೀರಿ, ಮಾನ್ಯ ಅಧ್ಯಕ್ಷರೆ, ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವಾಗ ಇದನ್ನೆಲ್ಲಾ ಹೇಳಿದೆ.

ಶ್ರೀ ಶಿವಾನಂದ ಪಾಟೀಲ್: ಇವುಗಳಿಗೆ ಪುನ:ಶ್ಚೇತನ ಗೊಳಿಸುವುದರೊಳಗಾಗಿ ಸರ್ಕಾರಕ್ಕೆ ಪುನ:ಶ್ಚೇತನ ಆಗುತ್ತದೆ.

ಶ್ರೀ ಸಿ.ಎಂ.ಉದಾಸಿ: ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾತನಾಡುವಾಗ ನಾನು ಇದನ್ನೆಲ್ಲಾ ಹೇಳಿದೆ. ನೀವು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ನೀವು ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳಿ ಎಣ್ಣೆ ಮಿಲ್‌ಗಳ ಬಗ್ಗೆ ಕೈ ಬಿಟ್ಟು ಬಿಟ್ಟಿರಿ. ಆ ನಂತರ ಟೆಕ್ಸ್‌ಟೈಲ್ ಅಷ್ಟಕ್ಕೇ ಕೈಬಿಟ್ಟಿರಿ. ಹಾನಿಯಲ್ಲಿವೆ ಎಂದು ಹೇಳಿದಿರಿ, ಅದಕ್ಕೆ ಏನು ಸಲಹೆ ಎಂದು ಹೇಳಲಿಲ್ಲ. ಅದನ್ನು ಹೇಗೆ ಮಾಡಬೇಕು ಏನು, ಇಲ್ಲದಿದ್ದರೆ ಮುಚ್ಚಿಬಿಡಬೇಕೋ, ಅಥವಾ ಉಳಿಸಬೇಕೋ ಎನ್ನುವುದರ ಬಗ್ಗೆ ನಿಮ್ಮ ಸಲಹೆ ಬರಲಿಲ್ಲ. ಅದನ್ನು ನೀವು ಮಾಡಿ.

ಶ್ರೀ ಸಿ.ಎಂ.ಉದಾಸಿ: ಟೆಕ್ಸ್‌ಟೈಲ್ ಮಿಲ್ ಸೆಂಟ್ ಪರ್ಸೆಂಟ್ ಕೆಪ್ಯಾಸಿಟಿ ಒಳಗೆ ಅದು ಪ್ರೊಡಕ್ಷನ್ ಮಾಡುತ್ತಿಲ್ಲ, ಅಲ್ಲಿ ನೌಕರರ ಸಂಖ್ಯೆ ಹೆಚ್ಚಿಗೆ ಇದೆ, 30 ಪರ್ಸೆಂಟ್‌ಗಿಂತ ಹೆಚ್ಚಿಗೆ ಪ್ರೊಡಕ್ಷನ್ ಆಗುತ್ತಿಲ್ಲ, ಆ ಕಾರಣದಿಂದ ಹಾನಿಯಾಗುತ್ತಿದೆ ಎನ್ನುವ ಮಾತುಗಳನ್ನು ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಟ್ಟೆ, ಅದನ್ನು ತಾವು ಗಂಭೀರವಾಗಿ ಚಿಂತನೆ ಮಾಡಲಿಲ್ಲ.

ಶ್ರೀ ಶಿವಾನಂದ ಪಾಟೀಲ್: ಕರ್ನಾಟಕದಲ್ಲಿ ಈಗ ಹತ್ತಿ ಎಲ್ಲಿದೆ? 10 ಲಕ್ಷ ಟನ್‌ದಲ್ಲಿ ಮೂರು ಲಕ್ಷ ಟನ್ ಮಾತ್ರ ಬೆಳೆಯುತ್ತಿದ್ದಾರೆ. ಏಳು ಲಕ್ಷ ಟನ್ ಡೆಫಿಸಿಟ್ ಇದೆ. ಇಂಪೋರ್ಟ್ ಮಾಡುತ್ತಿದ್ದೇವೆ. ಆಯಿಲ್ ಸೀಡ್ಸ್ ಅಷ್ಟೆ, ಆಯಿಲ್ ಸೀಡ್ಸೇ ಇಲ್ಲ.

ಶ್ರೀ ಸಿ.ಎಂ.ಉದಾಸಿ: ಹತ್ತಿ, ಆಯಿಲ್ ಸೀಡ್ಸ್ ಮತ್ತು ಬೇಳೆಕಾಳುಗಳು ಈ ಮೂರರ ಸಮಸ್ಯೆ ನಮಗೆ ಇದೆ. ಪ್ರೊಡಕ್ಷನ್ ಕಡಿಮೆ ಇದೆ. ತೊಗರಿಬೇಳೆ, ಕಡಲೆ ಬೇಳೆ ಮತ್ತು ಹತ್ತಿ ಇವೆಲ್ಲಾ ಪ್ರೊಡಕ್ಷನ್ ಕಡಿಮೆ ಇದೆ. ಇಂಡಸ್ಟ್ರೀ ನಡೆಸಬೇಕಾದರೆ ಕಮರ್ಷಿಯಲ್‌ದವರು ಯಾವ ರೀತಿ ನಡೆಸುತ್ತಾರೆ ಆ ರೀತಿ ನಡೆಸಬೇಕೆಂಬ ಚಿಂತನೆ ಇರಬೇಕು. ಬೇರೆ ರಾಜ್ಯದಲ್ಲಿರುವ ವ್ಯವಸ್ಥೆಯನ್ನಾದರೂ ತಂದು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಪಂಜಾಬ್‌ನವರು ಇಲ್ಲಿ ಬಂದು ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ತಮಿಳುನಾಡಿನವರು ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ, ಬೇರೆ ರಾಜ್ಯಗಳಲ್ಲಿ ಎಲ್ಲಿಎಕ್ಸಸ್ ಪ್ರೊಡಕ್ಷನ್ ಇದೆ ಅದನ್ನು ತೆಗೆದುಕೊಂಡು ಬಂದು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇಲ್ಲಿ ಏನಾಗಿದೆ ಎಂದರೆ, ಮ್ಯಾನೇಜ್‌ಮೆಂಟ್ ಮಾಡುವವರೇ ಸರಿಯಾದ ತಿಳುವಳಿಕೆ ಇದ್ದವರು ಇಲ್ಲ ಎನ್ನುವುದು ಮೊದಲನೇ ಪ್ರಶ್ನೆ ಇರುವುದು. ಟೆಕ್ನೋಕ್ರಾಟ್ಸ್ ಇಲ್ಲದೇ ಇರುವುದರಿಂದ ಇಷ್ಟೆಲ್ಲಾ ಸಮಸ್ಯೆಯಾಗಿದೆ ಎಂದು ನಾನು ಇಲ್ಲಿ ಹೇಳಿದೆ.

ಶ್ರೀ ಎಸ್.ಎಸ್. ಪಾಟೀಲ್: ಉದಾಸಿಯವರೇ, ಅವರು ಹೇಳಿದ ಹಾಗೆ, ಹತ್ತಿ ಇಲ್ಲ ಏಕೆ ಇಲ್ಲವೆಂದರೆ, ಟೆಕ್ಸ್‌ಟೈಲ್ ಮಿಲ್ ಒಂದು ವೇಳೆ ನೀವು ಉಳಿಸಿಕೊಂಡು ಬಂದರೂ ರೈತ ಹತ್ತಿ ಬೆಳೆಯುವುದಿಲ್ಲ. ಆ ಹತ್ತಿಗೆ ಆಗತಕ್ಕಂತಹ ಹಾನಿಯನ್ನು ಇವತ್ತು ಯಾರೂ ತುಂಬಿಕೊಡುವುದಿಲ್ಲ, ಇವತ್ತು ಹತ್ತಿ ಲಾಭದಾಯಕ ಬೆಳೆಯಾಗಿಲ್ಲ. ರೈತರು ಹತ್ತಿಯನ್ನು ಬಿತ್ತುವುದೇ ಬಿಡಲಿಕ್ಕೆ ಹತ್ತಿದ್ದಾರೆ ಯಾರ್‍ಯಾರು ಡಿಸಿಹೆಚ್ ಬೆಳೆದಿದ್ದಾರೆ ಅವರೆಲ್ಲಾ ಉರುಲು ಹಾಕಿಕೊಂಡಿದ್ದಾರೆ. ಉರುಲು ಹಾಕಿಕೊಂಡಿರುವವರೆಲ್ಲಾ ಹತ್ತಿ ಬೆಳೆಗಾರರೇ. ಈ ಪರಿಸ್ಥಿತಿ ಇದೆ. ಅದರ ಬಗ್ಗೆ ಕೂಡ ಸರ್ಕಾರ ವಿಚಾರ ಮಾಡಬೇಕಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ: ನಮ್ಮ ಕಡೆ ಒಂದು ಗಾದೆ ಮಾತು ಇದೆ. 'ಹಾಳಾಗಿ ಹತ್ತಿ ಬಿತ್ತು' ಎಂದು ಗಾದೆ ಇದೆ. ಹಾಳಾಗಬೇಕಾದರೆ ಹತ್ತಿ ಬಿತ್ತು ಎಂದು ನಮ್ಮ ಕಡೆಗಾದೆ ಮಾತು ಇದೆ.

ಶ್ರೀ ಸಿ.ಎಂ. ಉದಾಸಿ: ಹತ್ತಿಗೆ ರೋಗವನ್ನು ನಿಯಂತ್ರಣ ಮಾಡುವಸಲುವಾಗಿ ಮೊದಲಿನ ಹಾಗೆ ಔಷಧಿ ಹೊಡೆಯಬೇಕಾಗಿಲ್ಲ. ಈಗ ಹೊಸ ಸಂಶೋಧನೆ ಬಂದಿದೆ. ಅದು ಲ್ಯಾಬ್‌ಟು ಲ್ಯಾಂಡ್.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಉದಾಸಿಯವರೇ, ರೋಗದ ಪ್ರಶ್ನೆ ಅಲ್ಲ, ಹತ್ತಿಗೆ ಬೆಲೆ ಇಲ್ಲದೆ ಇರುವುದರಿಂದ ಸಮಸ್ಯೆಯಾಗಿದೆ. ಅದಕ್ಕೆ ಗಾದೆ ಮಾತು ಇರುವುದು.

ಶ್ರೀ ಸಿ.ಎಂ. ಉದಾಸಿ: ಬೆಲೆ ಇಲ್ಲದೆ ಇರುವುದರಿಂದ ತೊಂದರೆಯಾಗಿದೆ ಎಂದು ಹೇಳಿ. ಬೆಲೆ ಇಲ್ಲದೆ ಇರುವುದರಿಂದ ತೊಂದರೆಯಾಗಿದೆ ಎಂದು ಇಷ್ಟು ಮಾತ್ರ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ನಿಮ್ಮಲ್ಲಿ ಆ ಚಮತ್ಕಾರ ಏನಾಯಿತು? ರೈತರೆಲ್ಲಾ ಹಾಳಾಗಿ ಹೋದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಸಕ್ಕರೆ ಕಾರ್ಖಾನೆ ಪುನಶ್ಚೇತನದ ಬಗ್ಗೆ ಮಾತನಾಡುತ್ತಿದ್ದರು. ಮನ್ಯ ದೇಶಪಾಂಡೆಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಅವರು ಇಲ್ಲಿದ್ದಾರೆ. ಮನ್ಯ ದೇವೇಗೌಡರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬಂದಿದ್ದರು. ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನ ಮಾಡುತ್ತೇವೆಂದು ಅವರು ಹೇಳಿಕೆ ಕೊಟ್ಟಿದ್ದಾರೆ. ಅದು ಯಾವ ರೀತಿ ಮಾಡುತ್ತಾರೆಂದು ಹೇಳಬೇಕು. ನಮ್ಮಲ್ಲಿ ಜನ ಕಾಯುತ್ತಿದ್ದಾರೆ. ಪುನಶ್ಚೇತನ ಆಗುತ್ತದೆಯೋ ಇಲ್ಲವೋ ಎಂಬ ಭರವಸೆ ಬೇಕಾಗುತ್ತದೆ. ಕಳೆದ ಬಾರಿ ನಾನು ಚರ್ಚೆ ಮಾಡಿದಾಗ ತಾವು ಒಂದು ಬಾರಿ ಜಾಗವನ್ನು ಮಾರಾಟ ಮಾಡಿ ರೈತರಿಗೆ ಮತ್ತು ಕಾರ್ಮಿಕರಿಗೆ ಹಾಗೂ ಸಹಕಾರಿ ಸಂಘಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದಿರಿ. ನಾನು ತಮ್ಮ ಹತ್ತಿರ ಮನವಿ ಮಾಡಿಕೊಂಡೆ, ಹಣವನ್ನು ಮೊದಲು ಕೊಟ್ಟು, ಮಾರಾಟದಿಂದ ಬಂದದ್ದನ್ನು ಸರ್ಕಾರ ಅಡ್ಜೆಸ್ಟ್ ಮಾಡಿಕೊಳ್ಳಿ ಎಂದು ತಾವೇನು ಹೇಳಿದಿರಿ, ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್‌ನಿಂದ ಕೊಡಿಸುತ್ತೇವೆಂದು ಹೇಳಿದಿರಿ, ಇದುವರೆಗೆ ಏನೂ ಆಗಲಿಲ್ಲ. ದಯವಿಟ್ಟು ಅದರ ಬಗ್ಗೆ ಹೇಳಬೇಕು. ಇನ್ನೊಂದು ಪುನಶ್ಚೇತನಕ್ಕೆ ಸರ್ಕಾರ ಹಣವನ್ನು ಕೊಡುತ್ತದೆಯೇ ಇಲ್ಲವೇ ಎಂಬುದನ್ನು ಸರಿಯಾಗಿ ಹೇಳಬೇಕಾಗುತ್ತದೆ. ಏಕೆಂದರೆ, ರೈತರು ಅನಿರೀಕ್ಷಿತವಾಗಿ ಕಾಯಬಾರದು. ಅವರು ಅನಿರೀಕ್ಷಿತವಾಗಿ ಕಾದು ಏನೂ ಇಲ್ಲದೆ ಇರುವಂತಹ ಪರಿಸ್ಥಿತಿ ಬರಬಾರದು. ಹಣವನ್ನು ಕೊಡುವುದಾದರೆ ಹಣವನ್ನು ಕೊಡುತ್ತೇವೆ, ಅದನ್ನು

ಪುನಶ್ಚೇತನ ಮಾಡುತ್ತೇವೆ ಎನ್ನುವಂತಹ ಭರವಸೆ ಕೊಡಬೇಕಾಗುತ್ತದೆ. ಈಗ ಜಾಗವನ್ನು ಮಾರಿ ಹಣವನ್ನು ಕೊಡುತ್ತೀರಾ, ಅಥವಾ ಸರ್ಕಾರದಿಂದ ಹಣವನ್ನು ಕೊಡುತ್ತೀರಾ, ಡಿಸಿಸಿ ಬ್ಯಾಂಕಿನಿಂದ ಕೊಡಿಸುತ್ತೀರಾ, ಅಪೆಕ್ಸ್ ಬ್ಯಾಂಕಿನಿಂದ ಕೊಡಿಸುತ್ತೀರಾ ಎಂಬ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮಾಜಿ ಪ್ರಧಾನಿಗಳಾದ ಶ್ರೀಮಾನ್ ಹೆಚ್.ಡಿ.ದೇವೇಗೌಡರು ಕೇಂದ್ರ ಸಚಿವರಾದ ಮಾನ್ಯ ಶರದ್ ಪವಾರ್‌ರವರಿಗೆ ದೀರ್ಘವಾದ ಒಂದು ಕಾಗದವನ್ನು ಬರೆದಿದ್ದಾರೆ. ಅವರು ಖಂಡಿತ ನಾವು ಕರ್ನಾಟಕಕ್ಕೆ ಸಹಾಯ ಕೊಡುತ್ತೇವೆಂದು ಹೇಳಿದ್ದಾರೆ. ಇದು ಒಂದೇ ಅಲ್ಲ, ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಒಂದೇ ಅಲ್ಲ, ಇನ್ನಿತರೆ ಕಾರ್ಖಾನೆಗಳನ್ನು ಸೇರಿಸಿ ಒಂದು ಪ್ಯಾಕೇಜ್ ಪ್ರೋಗ್ರಾಂ ಮಾಡಿ ಯಾವ್ಯಾವುದು ಸಿಕ್ ಯೂನಿಟ್ ಇದೆ, ಅವುಗಳೆಲ್ಲವನ್ನೂ ಪುನಶ್ಚೇತನಗೊಳಿಸುವಂತಹ ಭರವಸೆಯನ್ನೂ ಕೂಡ ಪತ್ರ ಮುಖೇನ ತಿಳಿಸಿದ್ದಾರೆ. ಬಹುಶ: ಅದಕ್ಕೆ ಸಮಯಕ್ಕೆ ಕಾಯುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಪರಿಹಾರಕ್ಕೆ ಕಾದರೆ ಬಹುಶ: ಪುನಶ್ಚೇತನಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದು ಪ್ರಾಮಾಣಿಕ ಪ್ರಯತ್ನವಂತೂ ಸರ್ಕಾರದ ಕಡೆಯಿಂದ ನಡೆಯುತ್ತದೆ ಎಂದು ಹೇಳುತ್ತೇನೆ. ಮಾನ್ಯ ಸಹಕಾರ ಸಚಿವರೂ ಕೂಡ ಉತ್ತರ ಹೇಳುವಂತಹ ಸಂದರ್ಭದಲ್ಲಿ ಇದನ್ನು ಹೇಳುತ್ತಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಸಹಕಾರ ಸಚಿವರು ಸರಿಯಾದ ಉತ್ತರ ಕೊಡಬೇಕು. ಏಕೆಂದರೆ, ಅವರು ಒಂದು ಹೇಳಿಕೆ ಕೊಡುವುದು, ತಮ್ಮಿಂದ ಒಂದುಹೇಳಿಕೆ ಬರುವುದು ಆಗಬಾರದು. ನಿರ್ದಿಷ್ಟವಾದ ಉತ್ತರವನ್ನು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ಸಹಕಾರ ಸಲುವಾಗಿ ಉತ್ತರ ಕೊಡುವಾಗ ಹೇಳುತ್ತೇನೆ. ಉತ್ತರ ಕೊಡುವಾಗ ಬ್ರಹ್ಮಾವರ ಬಗ್ಗೆ, ಮಲಪ್ರಭಾ ಬಗ್ಗೆ, ಭಾಗ್ಯಲಕ್ಷ್ಮಿ ಬಗ್ಗೆ ಮತ್ತು ಹಾವೇರಿ ಬಗ್ಗೆ ಹೇಳುತ್ತೇನೆ. ಆದರೆ ಲ್ಯಾಂಡ್ ಬಗ್ಗೆ ತಾವು ರಿಕ್ವೆಸ್ಟ್ ಮಾಡಿದ್ದು, immediately we permitted. ಪರ್ಮಿಟ್ ಮಾಡಿದರೂ ಸಹ ಬೋರ್ಡನವರು ಲ್ಯಾಂಡ್

ಸೇಲ್ ಮಾಡಲಿಲ್ಲ. ಮೊನ್ನೆ ಕೂಡ ನಾನು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ. They should take immediate action on that ಅಂತ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಏಕೆಂದರೆ, ಪುನ:ಶ್ಚೇತನ ಆಗುತ್ತದೆಯೇ ಇಲ್ಲವೇ ಎಂಬುದು ನಮಗೆ ಬೇಕು.

ಮಾನ್ಯ ಸದಸ್ಯರು: ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಲೆಕ್ಕಪರಿಶೋಧನೆ ತಾವು ಮಾಡಿದ್ದೀರಿ, ಆ ಬಗ್ಗೆ ಇದುವರೆಗೆ ಎಷ್ಟು ಲುಕ್ಸಾನು ಆಗಿದೆ ಏನು ಎಂದು ಗೊತ್ತಾಗಲಿಲ್ಲ. ಅದೂ ಸಹಿತ ಗೊತ್ತಾಗಬೇಕು.

ಶ್ರೀ ಸಿ.ಎಂ. ಉದಾಸಿ: ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 600 ಅರ್ಬನ್ ಬ್ಯಾಂಕುಗಳು ಇವೆ. ಸೊಸೈಟಿಗಳು ಸೇರಿ ಇವೆ. ಸುಮಾರು 300 ಅರ್ಬನ್ ಬ್ಯಾಂಕುಗಳಲ್ಲಿ ಠೇವಣಿ ಇಟ್ಟಂತಹ ಜನರಿಗೆ ಇವತ್ತು ಡೆಪಾಸಿಟ್ ಇನ್‌ಶ್ಯೂರೆನ್ಸ ತರಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಇತ್ತೀಚಿನ ಆಡಳಿತ ಮಂಡಳಿಗಳಲ್ಲಿ ಅನೇಕ ಕಡೆಗಳಲ್ಲಿ ಆಗುತ್ತಿರುವಂತಹ ಅನಾಹುತಗಳನ್ನು ನಾವು ಗಮನಿಸಿದರೆ, ಇನ್‌ಶ್ಯೂರೆನ್ಸ್ ಬರದೇ ಇದ್ದರೆ ಸಮಸ್ಯೆಯಾಗುತ್ತದೆ. ಅದಕ್ಕೆ 50,000 ರೂಪಾಯಿಯವರೆಗೆ ಮಾತ್ರ ಇನ್‌ಶ್ಯೂರೆನ್ಸ್ ಮಾಡಬೇಕೆಂದು ವಿಚಾರ ಇದೆ ಎಂದು ತಿಳಿದು ಬರುತ್ತದೆ. 50,000 ರೂಪಾಯಿಗಳಿಗೆ ಬದಲಾಗಿ ಕನಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಇನ್‌ಶ್ಯೂರೆನ್ಸ್ ಬರುವ ಹಾಗೆ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಕ್ರೆಡಿಟ್ ಸೊಸೈಟಿಗಳಲ್ಲಿ ಆ ಪ್ರಕಾರ ಮಾಡಬೇಕೆಂದು ಒಂದು ಯೋಜನೆ ಹಾಕಿಕೊಂಡಿದ್ದೇವೆ. Urban Banks are already covered under RBI. ಅದಕ್ಕೆ ಇನ್‌ಶ್ಯೂರೆನ್ಸ್ ಇರುತ್ತದೆ.

ಶ್ರೀ ಎ. ಪಾಪರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಹಕಾರ ಸಚಿವರಲ್ಲಿ ನನ್ನ ವಿನಂತಿ. ನಮ್ಮ ಉದಾಸಿಯವರು ಎಲ್ಲಾ ಸ್ಪಿನ್ನಿಂಗ್ ಮಿಲ್‌ಗಳ ಬಗ್ಗೆ ಹೇಳಿದರು, ನಮ್ಮ ರಾಯಚೂರು ಜಿಲ್ಲೆಯಲ್ಲಿ ಕೂಡ ಒಂದು ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ ಇದೆ. ಇದು ಬಹಳ ಹಳೆಯ ಸ್ಪಿನ್ನಿಂಗ್ ಮಿಲ್. 1972ರಲ್ಲಿ ಆದಂತಹ ಸ್ಪಿನ್ನಿಂಗ್ ಮಿಲ್. ಇದು ಬಂದ್ ಆಗಿ 10 ವರ್ಷಗಳಾದವು. ಅದರ ಪುನ:ಶ್ಚೇತನದ ಸಲುವಾಗಿ ಯಾವುದೇ ರೀತಿಯಲ್ಲಿ ಪುನ: ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯಾವುದೇ ರೀತಿಯಲ್ಲಿ ಮುತುವರ್ಜಿ ವಹಿಸಲಿಲ್ಲ. ಅದಕ್ಕೆ ಕಾರಣವೇನು? ಇದು ಹಿಂದುಳಿದಂತಹ ಭಾಗ, ರಾಯಚೂರು ಅತೀ ಹೆಚ್ಚು ಹತ್ತಿ ಬೆಳೆಯುವಂತಹ ಸ್ಥಳ. ಇಡೀ

ಏಷಿಯಾ ಖಂಡದಲ್ಲಿಯೇ ನಂಬರ್ 1 ಕಾಟನ್ ಮಾರ್ಕೆಟ್ ಸೆಪರೇಟಾಗಿ 50 ಕೋಟಿ ರೂಪಾಯಿಯಲ್ಲಿ ಅಭಿವೃದ್ಧಿಯಾಗಿದೆ. ಅಂತಹ ಕ್ಷೇತ್ರದಲ್ಲಿ ಈ ಒಂದು ಸ್ಪಿನ್ನಿಂಗ್ ಮಿಲ್ ಇನ್ನೂ ಕೂಡ ಪ್ರಾರಂಭವಾಗಿಲ್ಲ. ನಮ್ಮ ಉದಾಸಿಯವರು ಹೇಳಿದ ಪ್ರಕಾರ ಅಲ್ಲಿ ಬಂದಂತಹ ಅಧಿಕಾರಿಗಳು, ಎಂಡಿಗಳು ಯಾರೂ ಟ್ರೈನ್ಡ್ ಆದ ಅಧಿಕಾರಿಗಳು ಬರಲಿಲ್ಲ. ಅವರಿಗೆ ಏನೂ ಗೊತ್ತಿಲ್ಲ. ಕಾಟನ್ ಎಂದರೆ ಏನು? ಹತ್ತಿ ಎಂದರೆ ಏನೂ ಅದೂ ಗೊತ್ತಿಲ್ಲ. ಅಂಥ ಅಧಿಕಾರಿಗಳನ್ನು ಹಾಕುವುದರಿಂದ ಆ ಒಂದು ಸ್ಪಿನ್ನಿಂಗ್ ಮಿಲ್ ಹಾಳಾಗುವುದಕ್ಕೆ ಕಾರಣವಾಯಿತು. ಈಗಲಾದರೂ ಸರ್ಕಾರ ಅದರ ಮೇಲೇಯೇ ಅವಲಂಬಿತರಾಗಿರುವಂಥ ಒಂದು ಸಾವಿರ ನೌಕರರಿಗೆ ಇವೊತ್ತಿನವರೆಗೂ ಹತ್ತು ವರ್ಷದಿಂದ ಸಂಬಳವೇ ಇಲ್ಲ. ಅವರೆಲ್ಲಾ ಬೀದಿ ಪಾಲಾಗಿದ್ದಾರೆ. ಅವರಿಗೆ ವ್ಯವಸ್ಥೆಯನ್ನು ಮಾಡಬೇಕೆಂದು ತಮಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಷಯ, ನಮ್ಮ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನದ್ದು ಕಳೆದ ಮೂರು ದಿವಸದಿಂದ ರಿಸರ್ವ್ ಬ್ಯಾಂಕ್ ಅಫ್ ಇಂಡಿಯಾದವರು ಈ ಬ್ಯಾಂಕ್‌ನ ಟ್ರಾನ್ಸಾಕ್ಷನ್‌ನನ್ನು ಬಂದ್ ಮಾಡಿದ್ದಾರೆ. ಈಗಾಗಲೇ ಮೂರು ದಿವಸವಾಯಿತು. ಹೀಗಾದರೆ ಅಲ್ಲಿ ಇದ್ದಂಥ ಡಿಪಾಸಿಟ್ ಹೋಲ್ಡರ್ಸ್ ಎಲ್ಲಿಗೆ ಹೋಗಬೇಕು? ಈ ಬ್ಯಾಂಕು ರಾಯಚೂರು ಅರ್ಬನ್ ಕೋ-ಆಪರೇಟಿವ್. ಇದು ಕಳೆದ ಮೂರು ದಿವಸದಿಂದ ಬಂದ್ ಆಗಿದೆ. ಇಲ್ಲಿ ಹಣ ಇಟ್ಟಿದ್ದಂಥ ಬೇಕಾದಷ್ಟು ಡಿಪಾಸಿಟ್ ಹೋಲ್ಡರ್ಸ ಇವೊತ್ತು ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ ಏನಾದರೂ ಅನುಕೂಲ ಮಾಡಿಕೊಡಬೇಕು. ಅಲ್ಲಿ ಈಗ ಇಟ್ಟಿದ್ದ ಹಣವನ್ನು ವಾಪಸ್ಸು ಕೊಡುತ್ತಿಲ್ಲ. ಯಾರು ಸೇವಿಂಗ್ ಅಕೌಂಟ್‌ನಲ್ಲಿ ಹಣ ಇಟ್ಟಿದ್ದಾರೋ ಅವರಿಗೆ ತಮ್ಮ ಸೇವಿಂಗ್ ಅಕೌಂಟ್‌ನಿಂದ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತಿಲ್ಲ. ಒಂದು ಸಾವಿರ ರೂಪಾಯಿ ಒಬ್ಬರಿಗೆ ಕೊಡಬೇಕೆಂದು ಹೇಳುತ್ತಾರೆ. ಇವೊತ್ತು ಐದು, ಆರು ಲಕ್ಷ ರೂಪಾಯಿಗಳನ್ನು ಇಟ್ಟಿರುವಂಥ ಜನರಿಗೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರೇನು ಮಾಡಬೇಕು ಹೇಳಿ? ಆದುದರಿಂದ ತಾವು ದಯಮಾಡಿ ತಮ್ಮ ಉತ್ತರದಲ್ಲಿ ಇದರ ಬಗ್ಗೆ ಹೇಳಬೇಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ತಾವು ಧಾರವಾಡದ ಕೆ.ಸಿ.ಸಿ.ಬ್ಯಾಂಕ್‌ನ ಬಗ್ಗೆ ಅನೇಕ ಸಾರಿ ರಿವ್ಯೂ ಮಾಡಿದ್ದೀರಿ. ಅದರ ನೆರವಿಗೆ ಬರುತ್ತೇನೆ ಎನ್ನುವಂಥ

ಮಾತುಗಳನ್ನು ಹೇಳಿ 25 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೀರಿ. ಆ ಬ್ಯಾಂಕ್‌ನ ಪರಿಸ್ಥಿತಿ ಹೇಗಿದೆಯೆಂದರೆ ಆ ಬ್ಯಾಂಕ್‌ನಲ್ಲಿ 270 ಕೋಟಿ ರೂಪಾಯಿಗಳ ಸಾಲವನ್ನು ರೈತರಿಗೆ ಕೊಟ್ಟಿದ್ದರು. ಹಾಗೂ ಇಂಡಸ್ಟ್ರೀಗಳಿಗೆ, ಟೆಕ್ಸ್ ಟೈಲ್ ಮಿಲ್ ಹಾಗೂ ಆಯಿಲ್ ಮಿಲ್‌ಗಳಿಗೆ ಎಲ್ಲಾ ಸೇರಿ ಸುಮಾರು 94 ಕೋಟಿ ರೂಪಾಯಿ ಸಂಸ್ಕರಣ ಘಟಕಗಳಿಂದ ಆಯಿಲ್ ಮಿಲ್‌ಗಳೂ ಸೇರಿದಂತೆ ಬರಬೇಕಾಗಿದೆ. 70 ಕೋಟಿ ರೂಪಾಯಿಗಳಷ್ಟು ಹಣವನ್ನು ಇಂಡಿವಿಜ್ಯುಯಲ್ ಡಿಫಾಸಿಟರ್ಸ್‌ಗೆ ಕೊಡಬೇಕಾಗಿದೆ. 182 ಕೋಟಿ ರೂಪಾಯಿಗಳಷ್ಟು ಹಣ ಇವೊತ್ತೂ ಎಸ್.ಎಲ್.ಆರ್. ನಲ್ಲಿ ಅರ್ಬನ್ ಬ್ಯಾಂಕ್‌ನಲ್ಲಿ ಇಟ್ಟಿರುವಂಥ ಹಣ ಪಾವತಿಯಾಗಬೇಕಾಗಿದೆ. ಆ ಬ್ಯಾಂಕ್‌ನಲ್ಲಿ ಸರಿಯಾದ ರೀತಿಯಲ್ಲಿ ತಾವು ಸುಸ್ಥಿತಿಗೆ ತರುವುದಕ್ಕೆ ಆಲಕ್ಷ್ಯ ಮಾಡಿದ್ದೇ ಆದರೆ ಆ ಮೂರು ಜಿಲ್ಲೆಯಲ್ಲಿರುವಂಥ ಅರ್ಬನ್ ಬ್ಯಾಂಕ್‌ಗಳ ಆರ್ಥಿಕ ಪರಿಸ್ಥಿತಿ ಮೇಲೆ ದುಷ್ಪರಿಣಾಮವಾಗಿ ಆ ಬ್ಯಾಂಕ್‌ಗಳು ನಿಲ್ಲುವಂಥ ಪರಿಸ್ಥಿತಿ ಬರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ಇಲ್ಲಿ ತರುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಅದಕ್ಕೆ ತಾವು ಸರ್ಕಾರದಿಂದ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಆ 25 ಕೋಟಿ ರೂಪಾಯಿಗಳು ಇದುವರೆಗೆ ಬಿಡುಗಡೆಯಾಗಿಲ್ಲ. ಆ 25 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಟ್ಟು ಬಿಡುಗಡೆಮಾಡಿದಿರಿ ಎಂದರೆ ಅದೊಂದು ದೊಡ್ಡ ಉಪಕಾರ ಮಾಡಿದಿರಿ ಎನ್ನುವುದಲ್ಲ, ಈಗಾಗಲೇ ಅವರಿಗೆ ನೀವು ಕೊಡಬೇಕಾಗಿರುವುದೇ 73 ಕೋಟಿ ರೂಪಾಯಿಗಳು ಇದೆ. ಈಗೇನಾಗಿದೆ 2003–04 ರಲ್ಲಿ ಮನ್ನಾ ಹಣ ಏನಿದೆ ಅದೇ 55 ಕೋಟಿ 10 ಲಕ್ಷ ರೂಪಾಯಿಗಳು ಬರಬೇಕಾಗಿದೆ. 18 ಕೋಟಿ 37 ಲಕ್ಷ ರೂಪಾಯಿಗಳು ಅಪೆಕ್ಸ್ ಬ್ಯಾಂಕ್‌ನಿಂದ ಬರಬೇಕಾಗಿದೆ. ಇದೇ 73 ಕೋಟಿ 47 ಲಕ್ಷ ರೂಪಾಯಿ ಕೆ.ಸಿ.ಸಿ. ಬ್ಯಾಂಕ್‌ಗೆ ಬರಬೇಕಾಗಿದೆ. ನಿಮ್ಮ ಸರ್ಕಾರದಿಂದ ಮತ್ತು ಅಪೆಕ್ಸ್ ಬ್ಯಾಂಕ್‌ನಿಂದ ಬರಬೇಕಾಗಿರುವಂಥ ಹಣವೇ 73 ಕೋಟಿ ರೂಪಾಯಿಗಳಿದೆ. ಅಲ್ಲೇನಾಗಿದೆ, 73 ಕೋಟಿ ರೂಪಾಯಿಗಳಿಗೆ ಇವೊತ್ತು ನೀವು ಒಂದು ವರ್ಷ ವಿಳಂಬ ಮಾಡಿದ್ದೇ ಆದರೆ ಹತ್ತು ಪರ್ಸೆಂಟ್ ಬಡ್ಡಿ ಎಂದರೂ 7 ಕೋಟಿ ರೂಪಾಯಿಗಳು ಮತ್ತೆ ಜಾಸ್ತಿಯಾಗುತ್ತದೆ. ಈ ರೀತಿ ನೀವು ವಿಳಂಬ ಮಾಡಿದಷ್ಟು ಆ ಸಂಸ್ಥೆಗೆ ಇನ್ನೂ ಹೆಚ್ಚು ಹಾನಿಯಾಗಲು ತಾವು ಕಾರಣರಾಗುತ್ತೀರಿ. ಇದು ಆಗಬಾರದು ಎನ್ನುವುದಾದರೆ ತಾವು ಅತಿ

ಶೀಘ್ರದಲ್ಲಿಯೇ ಆಲೋಚನೆಯನ್ನು ಮಾಡಬೇಕು. 94 ಕೋಟಿ ರೂಪಾಯಿಗಳು ಎಂದು ಒಂದು ಕಾಲದಲ್ಲಿ ಚಿಂತನೆ ನಡೆದಿತ್ತು. ಏನು ಚಿಂತನೆ ನಡೆದಿತ್ತೆಂದರೆ ಈಗೇನು 94 ಕೋಟಿ ರೂಪಾಯಿಗಳು ಈಗೇನು ಟೆಕ್ಸ್‌ಟೈಲ್ ಮಿಲ್ ಮತ್ತು ಆಯಿಲ್ ಮಿಲ್‌ಗಳಿಗೆ ಸುಮಾರು 94 ಕೋಟಿ ರೂಪಾಯಿ ಹಣವೇನು ಬರಬೇಕಾಗಿದೆ ಇವುಗಳನ್ನೆಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗೆ ವರ್ಗಾವಣೆ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅದು ಒಂದು ವೇಳೆ ಆಗದಿದ್ದರೆ ಇವೊತ್ತು ಅದೊಂದು ಭಾರ ಕೆ.ಸಿ.ಸಿ. ಬ್ಯಾಂಕ್‌ಗೆ ಕಡಿಮೆಯಾಗುತ್ತಿತ್ತು. ಆ ಸಂದರ್ಭದಲ್ಲಿ ಯಾರದೋ ರಾಜಕೀಯ ಪ್ರಭಾವದ ಪರಿಣಾಮವಾಗಿ ಹಾಗೆಯೇ ಉಳಿಯಿತು. ಏಕೆಂದರೆ ರಾಜಕೀಯ ವ್ಯಕ್ತಿಗಳು ಅದರಲ್ಲಿ ಮಾಲೀಕರಾಗಿ ಅದನ್ನು ನಡೆಸುವವರು ಇದ್ದಿದ್ದರಿಂದ ಅವರಿಗೇನಾಯಿತು ಎಂದರೆ ನಾಳೆ ಇದು ಹರಾಜಿಗೆ ಬಂದರೆ ಎನ್ನುವ ಭಯದಿಂದ ಇದು ಆಗದ ಹಾಗೆ ತಡೆಹಿಡಿದರು. ಈ ಸಂಸ್ಥೆ ಮುಳುಗಿದರೂ ಚಿಂತೆಯಿಲ್ಲ ನಾವು ಬದುಕಬೇಕು. ಅನ್ನುವಂಥ ಆಲೋಚನೆಯನ್ನು ಮಾಡಿದರು ಅನ್ನುವಂಥ ಭಾವನೆ ಸಾರ್ವತ್ರಿಕವಾಗಿ ಮೂಡಿದೆ. ಇದು ಹೋಗಬೇಕಾದರೆ ಈ 94 ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾದಂಥ ಕೆಲಸವನ್ನು ಮಾಡಲು ತಾವು ಗಮನವನ್ನು ಕೊಡಬೇಕಾಗುತ್ತದೆ. ಇನ್ನು ಚಾಲ್ತಿ ಸಾಲವೆಲ್ಲಾ ಸೇರಿ 2004–05 ನೆಯ ಸಾಲಿನೊಳಗೆ ಬಡ್ಡಿ ಮನ್ನಾದಲ್ಲಿಯೇ ಸುಮಾರು 100 ಕೋಟಿ ರೂಪಾಯಿಗಳವರೆಗೂ ಬರಬಹುದು ಎನ್ನುವ ಅಂದಾಜಿದೆ. ಆ ಹಣವನ್ನು ಕೊಡಬೇಕಾದಂಥ ಕೆಲಸವನ್ನು ಅತಿ ಶೀಘ್ರದಲ್ಲಿಯೇ ಮಾಡಿಸಿಕೊಡಬೇಕು ಎನ್ನುವುದನ್ನು ತಮ್ಮ ಎದುರಿಗೆ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎಸ್.ಎಲ್.ಆರ್. ನಲ್ಲಿ ಇಟ್ಟಂಥದ್ದರಲ್ಲಿ ಅರ್ಬನ್ ಬ್ಯಾಂಕ್‌ನವರಿಗೆ ಅನುಕೂಲ ಕಲ್ಪಿಸಿಕೊಡಬೇಕಾದಂಥ ಕೆಲಸದಲ್ಲಿ ತಾವು ಅತಿ ಶೀಘ್ರದಲ್ಲಿಯೇ ಬರದೇ ಇದ್ದರೆ ಅನೇಕ ಕಡೆಯಲ್ಲಿ ತೊಂದರೆಯಾಗುತ್ತದೆ. ಉದಾಹರಣೆಗೆ ಇವೊತ್ತು ಗುರುಸಿದ್ದೇಶ್ವರ ಬ್ಯಾಂಕ್, ಹುಬ್ಬಳ್ಳಿ ಇವರು ಏನು ಹೇಳಿದ್ದಾರೆಂದರೆ 12 ಕೋಟಿ ರೂಪಾಯಿಗಳನ್ನು ಎಸ್.ಎಲ್.ಆರ್. ನಲ್ಲಿ ಇಟ್ಟಿದ್ದಾರಂತೆ. ಆದರೆ ಅವರು ಅಲ್ಲಿ ಇಡಬೇಕಾದದ್ದು 6 ಕೋಟಿ ರೂಪಾಯಿ ಮಾತ್ರ. ಇವೊತ್ತಿನವರೆಗೆ ಡಿಫಾಸಿಟ್‌ನ ಪ್ರಮಾಣದ ಪ್ರಕಾರ 6 ಕೋಟಿ ರೂಪಾಯಿ ಅಲ್ಲಿ ಎಕ್ಸ್‌ಸ್ ಇದೆ. ಅದನ್ನು ಕೊಡಲಿಕ್ಕೂನೂ ಆಗುವುದಿಲ್ಲ. ಎಸ್. ಎಲ್.ಆರ್. ನಲ್ಲಿರುವ ಹಣವನ್ನು ಕೊಡಲಿಕ್ಕೂನೂ ಆಗುವುದಿಲ್ಲ. ಆಮೇಲೆ

ಅವರ ಕರೆಂಟ್ ಅಕೌಂಟ್‌ನಲ್ಲಿ 2 ಕೋಟಿ 19 ಲಕ್ಷ ರೂಪಾಯಿ ಇದೆ. ಅದನ್ನು ಇವೊತ್ತು ಪೇಮೆಂಟ್ ಮಾಡುವುದಕ್ಕೆ ಆಗುತ್ತಿಲ್ಲ. ಕೆ.ಸಿ.ಸಿ. ಬ್ಯಾಂಕ್‌ನಿಂದ. ಇದರೆಲ್ಲದರ ಜೊತೆಗೆ ಈಗಾಗಲೇ ಎರಡು ವರ್ಷವಾಯ್ತು, ನಿಮಗೆ ಒಂದು ಆಶ್ಚರ್ಯಕರ ಸುದ್ಧಿಯನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲಾಖಾ ಅಧಿಕಾರಿಗಳು ಎಷ್ಟು ನಿಷ್ಕ್ರಿಯರು ಇರುತ್ತಾರೆಂದರೆ, ಒನ್ ಟೈಂ ಸೆಟ್ಲ್‌ಮೆಂಟ್ ಮಾಡಿಸಿಕೊಳ್ಳುತ್ತೇವೆ, ನಾವು ವಸೂಲಿ ಮಾಡುತ್ತೇವೆ ಎಂದು ಅರ್ಬನ್ ಬ್ಯಾಂಕ್‌ನವರು ಹೊರಟರೆ, ಬಡ್ಡಿ 19 ಪರ್ಸೆಂಟ್ ಇದ್ದದ್ದನ್ನು 15 ಪರ್ಸೆಂಟ್ ಮಾಡುತ್ತೇವೆ ಎಂದು ಹೇಳಿದರೆ ಅವರಿಗೆ ಅನುಮತಿಯನ್ನು ಕೊಡುವುದಕ್ಕೆ ನಿಮ್ಮ ಇಲಾಖೆಯಲ್ಲಿ ವಿಳಂಬ ಮಾಡುತ್ತಾರೆ. ಇದೇ ಗುರುಸಿದ್ದೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನವರು 31-10-2004 ಕ್ಕೇ ನಿಮ್ಮ ಇಲಾಖಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ನಾವು 19 ಪರ್ಸೆಟ್ ಇರುವುದನ್ನು ತೆಗೆದು 15 ಪರ್ಸೆಂಟ್ ಬಡ್ಡಿ ಮಾಡಿದ್ದೇ ಆದರೆ ನಮಗೆ ಎಂಟು ಹತ್ತು ಕೋಟಿ ರೂಪಾಯಿಗಳ ಹಣ ವಸೂಲಾಗುತ್ತದೆಯಾದ್ದರಿಂದ ಒನ್ ಟೈಂ ಸೆಟ್ಲ್‌ಮೆಂಟ್ ಮಾಡಿಕೊಳ್ಳುತ್ತೇವೆಯಾದ ಕಾರಣ 4 ಪರ್ಸೆಂಟ್ ಬಡ್ಡಿ ಕಡಿಮೆ ಮಾಡವುದಕ್ಕೆ ಅನುಮತಿಯನ್ನು ಕೊಡಿ ಎಂದು ಕೇಳಿದರೆ ಇವೊತ್ತಿರವರೆಗೂ ಅನುಮತಿಯನ್ನು ಕೊಡುತ್ತಿಲ್ಲ. ಇದು ಏನನ್ನು ತೋರಿಸುತ್ತದೆ ಎಂದರೆ ಈ ಇಲಾಖೆಗೆ ಈ ಸಂಸ್ಥೆ ಬೆಳೆಯಬೇಕು ಎನ್ನುವ ಸಹಾನುಭೂತಿ ಏನು ಇರಬೇಕಾಗಿತ್ತೋ ಮತ್ತು ಆ ಇಚ್ಛಾಶಕ್ತಿ ಏನು ಇರಬೇಕಾಗಿತ್ತೋ ಇದರಲ್ಲಿ ಕೊರತೆ ಇದೆಯೆಂದು ಸ್ಪಷ್ಟವಾಗಿ ಕಾಣುತ್ತದೆ. ಇದನ್ನು ಶೀಘ್ರಗತಿಯಲ್ಲಿ ಮಾಡಿಸುವಂಥ ಕೆಲಸವನ್ನು ತಾವು ಮಾಡುತ್ತೀರಿ ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ಇನ್ನು ಇವೊತ್ತು ತಮಗೆಲ್ಲಾಗೊತ್ತಿರುವ ಹಾಗೆ ಎ.ಪಿ.ಎಂ.ಸಿ. ಮಾರುಕಟ್ಟೆಗಳ ಬಗ್ಗೆ ಸುಧಾರಣೆಯಾಗ ಬೇಕಾಗಿದೆ. ವ್ಯಾಟ್ ಸಿಸ್ಟಂ ಬಂದಮೇಲೆ ಬಹುತೇಕ 99 ಪರ್ಸೆಂಟ್ ರೈತರು ಬೆಳೆಯನ್ನು ಮಾರುಕಟ್ಟೆಯಲ್ಲಿಯೇ ಮಾರುವಂಥ ವ್ಯವಸ್ಥೆ ಬರುತ್ತಿರುವುದರಿಂದ ಎಲ್ಲಾ ಮಾರುಕಟ್ಟೆಗಳಿಗೂ ಕೂಡ ಎಲೆಕ್ಟ್ರಾನಿಕ್ ವೇ ಬ್ರಿಜ್‌ಗಳು ಬರುವಂಥ ವ್ಯವಸ್ಥೆ ಆಗಬೇಕಾಗಿದೆ. ಬಹಳ ಕಡೆ ಏನು ಶೋಷಣೆ ನಡೆಯುತ್ತಿದೆ ಎಂದರೆ ತೂಕ ಮಾಡುವಾಗ ಹಳ್ಳಿಗಳಲ್ಲಿ ರೈತರಿಗೆ ಬಹಳ ಶೋಷಣೆ ನಡೆಯುತ್ತಿದೆ. ಅದು ಹೋಗಬೇಕಾಗಿದೆ. ಆದಕಾರಣ ಎಲೆಕ್ಟ್ರಾನಿಕ್ ಯಂತ್ರ ದಿಂದ ಮೆಷರ್‌ಮೆಂಟ್ ಮಾಡುವಂಥ ವ್ಯವಸ್ಥೆಯನ್ನು ಪ್ರತಿಯೊಂದು ಮಾರ್ಕೆಟ್ ಯಾರ್ಡ್ ಮತ್ತು

ಸಬ್ ಮಾರ್ಕೆಟ್ ಯಾರ್ಡ್‌ನಲ್ಲಿ ಬರುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅದನ್ನು ಮಾಡದಿದ್ದರೆ ರೈತರಿಗೆ ಹಾಲಿ ವ್ಯವಸ್ಥೆಯಿಂದ ಲಾಭವಾಗುವುದಿಲ್ಲ ಮತ್ತು ರೈತರು ಮೋಸ ಹೋಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ತಾವು ಹೆಚ್ಚು ಗಂಭೀರವಾಗಿ ಆಲೋಚನೆಯನ್ನು ಮಾಡಿ ಮಾರುಕಟ್ಟೆಗಳಲ್ಲಿ ಇವೊತ್ತು ಹೆಚ್ಚು ಬರಬೇಕಾದರೆ ರೈತರಿಗೆ ಬೆಲೆ ಕುಸಿದಂಥ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಇಂಟರ್‌ವಿನ್ ಮಾಡಬೇಕಾದಂಥ ಎ.ಪಿ.ಎಂ.ಸಿ. ಯವರೇ ಮಾರುಕಟ್ಟೆಯಲ್ಲಿಯೇ ಗೋಡೌನ್‌ಗಳನ್ನು ಮಾಡಿ ಕೊಂಡು ಬೆಳೆಯನ್ನು ಅಲ್ಲಿಟ್ಟುಕೊಂಡು ಅದರ ಮೇಲೆ ಲೋನ್ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಇನ್ನು ಒಂದು ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಎ.ಪಿ.ಎಂ.ಸಿ. ಆ್ಯಕ್ಟ್‌ನಲ್ಲಿ ಇನ್‌ಸಾಲ್ವೆಂಟ್ ಎನ್ನುವ ಶಬ್ಧಕ್ಕೆ ಡೆಫನೇಶನ್ ಏನು ಕೊಟ್ಟಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. 1972 ರಿಂದ 78 ರವರೆಗೆ ಒಬ್ಬ ಶಾಸಕರು ಇದ್ದರು, ಮಾನ್ಯ ಸಚಿವರ ಗಮನಕ್ಕೆ ಇದನ್ನು ತರಲು ಇಚ್ಛೆಪಡುತ್ತೇನೆ, ಎ.ಪಿ.ಎಂ.ಸಿ.ಯಲ್ಲಿ ಏನಿದೆಯೆಂದರೆ ಅದು ವೇಗ್ ಆ್ಯಕ್ಟ್, ಇನ್‌ಸಾಲ್ವೆಂಟ್ ಎಂದು. 1975–76 ನೆಯ ಸಾಲಿನಲ್ಲಿ ಒಬ್ಬರು ದಾವಾ ಮಾಡಿದ್ದರು, ಆಗಿನ ಶಾಸಕರಮೇಲೆ ಡಿಕ್ರಿಯಾಗಿತ್ತು; ಆ ಡಿಕ್ರಿಯಾಗಿದ್ದನ್ನು ಹಿಡಿದುಕೊಂಡು ನಾನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೆ. ಇನ್‌ಸಾಲ್ವೆಂಟ್ ಎಂದರೆ ನಿಮಗೆ ಗೊತ್ತಿರಬಹುದು. ಓಣಿಗೇರಿಗದಿಗಪ್ಪಗೌಡರು ದಾವಾ ಮಾಡಿದ್ದರು. ಆರು ಸಾವಿರ ರೂಪಾಯಿಗೆ ಡಿಕ್ರಿಯಾಗಿತ್ತು. ಆ ಡಿಕ್ರಿ ಪರಿಣಾಮವಾಗಿ ಏನಾಯಿತೆಂದರೆ ಅದು ಇನ್‌ಸಾಲ್ವೆಂಟ್ ಎಂದು ಟ್ರೀಟ್ ಮಾಡುವುದಕ್ಕೆ ಬರುತ್ತಿತ್ತು. ಒಬ್ಬರು ಎ.ಪಿ.ಎಂ.ಸಿ. ಸದಸ್ಯರಾಗಿ ಶಾಸಕರು ಇದ್ದರು. ಅವರ ಮೇಲೆ ನಾನು ಏನು ಮಾಡಿದೆನೆಂದರೆ " Insoovent means a person who ceases to pay his debts in the ordinary course of business or cannot pay his debts as they become due whether he has committed an act of insolvecy or not." ಇದು ವೇಗ್ ಆಗಿದೆ. ಹೀಗಿರುವುದರಿಂದ ಯಾವುದೇ ಒಂದು ಬಾಕಿ ಇದ್ದರೂ ಸಹಿತ ಡಿಫಾಲ್ಟ್ ಎಂದು ಒಂದು ಬ್ಯಾಂಕಿನಿಂದ ಯಾವುದಾದರೂ ಒಂದು ನೀನು ಡಿಫಾಲ್ಟ್ ಇದೆ ಎಂದು ಬಾಕಿ ಬಂದರೆ ಸಾಕು, ಯಾವುದೇ ಇರಲಿ, ಇವೊತ್ತೇನು ಕೋ–ಆಪರೇಟಿವ್ ಮೂಮೆಂಟ್‌ನಲ್ಲಿ ಹೇಗಿದೆ ಎಂದರೆ ಕೋ–ಆಪರೇಟಿವ್ ಬ್ಯಾಂಕ್‌ನ ಡ್ಯೂಸ್

ಇದ್ದರೆ ಮಾತ್ರ ಡಿಫಾಲ್ಟರ್ ಎಂದು ಇದೆ. ಇದು ಆ ರೀತಿ ಆಗುವುದಿಲ್ಲ. ಇಲ್ಲಿ ಇನ್‌ಸಾಲ್ವಿಂಟ್ ಎನ್ನುವ ಶಬ್ದ ಏನು ಇದೆಯಲ್ಲಾ ಈ ಇನ್‌ಸಾಲ್ವಿಂಟ್ ಎನ್ನುವ ಶಬ್ಧವನ್ನು ಉಪಯೋಗ ಮಾಡಿಕೊಂಡು ಯಾರು ಬೇಕಾದರೂ ಸಹಿತ ಒಂದು ಅವರು ಹಣ ಕೊಡುವುದನ್ನು ಟೆಲಿಫೋನ್ ಬಿಲ್‌ಗೆ ಡಿಲೇ ಆದರೂ ಬರುತ್ತದೇನೋ ಎಂದು ಕೆಲವರು ಅರ್ಥ ಮಾಡಿದರು. ಆದರೆ debts ಎಂದು ಅರ್ಥ ಮಾಡಿರುವುದರಿಂದ ಒಂದು ಉಳಿದಿದೆ ಎಂದು ನಾನು ಭಾವಿಸುತ್ತೇನೆ. ಸಾಲ ಅನ್ನುವುದು ಸಧ್ಯಕ್ಕೆ ಉಳಿದಿರುವುದರಿಂದ. ಅದಕ್ಕಾಗಿ ಇದನ್ನು ಆ್ಯಕ್ಟ್‌ನಲ್ಲಿ ತಿದ್ದುಪಡಿ ಮಾಡುವುದು ಸೂಕ್ತವೆಂದು ನಾನು ಭಾವಿಸಿಕೊಂಡಿದ್ದೇನೆ. ಅದನ್ನು ತಾವು ಗಮನಿಸುತ್ತೀರಿ ಎಂದು ಹೇಳಿ ನಾನು ಇನ್ನೆರಡು ಸಲಹೆಗಳನ್ನು ತಮಗೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. 2002 ನೆಯ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ವೇರ್ ಹೌಸ್ ಕಾರ್ಪೋರೇಷನ್ನಿನ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಸುಮಾರು ಇಪ್ಪತ್ತು, ಇಪ್ಪತ್ತೆರಡು ಬಿಲ್ಡಿಂಗ್‌ಗಳನ್ನು ಕಟ್ಟಬೇಕಾದಾಗ ಸುಮಾರು 25 ರಿಂದ 26 ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯ ಮಾಡಿದ್ದಾರೆ. ಅದೊಂದು ಪ್ಯಾಕೇಜ್ ಮಾಡಿ ಇಲ್ಲಿಂದ ಟೆಂಡರ್ ಕೊಡುವಂಥ ಕೆಲಸವಾಗಿದೆ. ಆ ಕೆಲಸದಲ್ಲಿ ಕಳಪೆ ಕಾಮಗಾರಿ ಕೆಲಸವಾಯಿತು. ಕೋಟ್ಯಾಂತರ ರೂಪಾಯಿ ಹಣ ಅದರಲ್ಲಿ ಲೂಟಿಯಾಯಿತು ಎನ್ನುವಂಥ ಮಾತುಗಳು ಬಂದಾಗ ಏನಾಯ್ತು ಎಂದರೆ ಒಬ್ಬರು ನ್ಯಾಯಾಲಯಕ್ಕೆ ಹೋಗಿ Mandamus ಇಶ್ಯೂ ಮಾಡಿ ಎನ್‌ಕ್ವೈರಿಗೆ ಆರ್ಡರ್ ಮಾಡಿಸಿದ್ದಾರೆ. ಇದು ನಿಮ್ಮೆಲ್ಲರ ಗಮನಕ್ಕೆ ಬಂದಿರಬಹುದು ಎಂದು ನಾನು ಭಾವಿಸುತ್ತೇನೆ. ಇದು ವೇರ್‌ಹೌಸ್ ಕಾರ್ಪೋರೇಷನ್ನಿನ ಬಿಲ್ಡಿಂಗ್‌ಗಳ ಕಾಮಗಾರಿ ಕಳಪೆಯಾಗಿದ್ದರ ಬಗ್ಗೆ ಇಲಾಖೆಯ ಗಮನಕ್ಕೆ ಬಂದರೂ ಕೂಡ ಇದುವರೆಗೆ ಆ ಬಗ್ಗೆ ಕ್ರಮ ತೆಗೆದುಕೊಳ್ಳದೆಯೇ ಹಾಗೆಯೇ ಉಳಿದದ್ದಕ್ಕೆ ರಾಜಕೀಯ ಪ್ರಭಾವ ಎನ್ನುವಂಥ ಮಾತು ಇದ್ದಿರಬೇಕಾದರೆ ಅದು ಯಾರೇ ಎಂಥದ್ದೇ ದೊಡ್ಡ ವ್ಯಕ್ತಿ ಇದ್ದರೂ ಕೂಡ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾದಂಥ ವಿಚಾರದಲ್ಲಿ ತಾವು ಸರಿಯಾದ ರೀತಿಯಿಂದ ಕ್ರಮ ಕೈಗೊಳ್ಳುತ್ತೀರಿ ಎನ್ನುವ ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಇವೊತ್ತು ರೈತರ ಸಂತೆ ಎಂದು ಏನು ಮಾಡಿದ್ದೇವೆ, ಅದನ್ನು ಹುಬ್ಬಳ್ಳಿಯಲ್ಲಿ ಮಾಡಿದ್ದೇವೆ, ಅದು ಸಕ್ಸೆಸ್ ಆಗಲಿಲ್ಲ. ಇದನ್ನು ಯಾವ ರೀತಿ ಅಟ್ರ್ಯಾಕ್ಷನ್ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ರೈತರಿಗೆ ಬಹುತೇಕ ಏನಾಗಿದೆ

ಗ್ರಾಮೀಣ ಭಾಗದಿಂದ ಕಾಯಿಪಲ್ಲೆಗಳನ್ನು ತಂದು ಆ ಮಾರುಕಟ್ಟೆಗಳಲ್ಲಿ ಮಾರಬೇಕಾದಾಗ ಅವರಿಗೆ ಕೊಡಬೇಕಾದ ಪ್ರಚಾರದ ಒಂದು ವೈಫಲ್ಯದ ಕಾರಣ ಮತ್ತು ರಕ್ಷಣೆಯ ವೈಫಲ್ಯದ ಕಾರಣ ದಿಂದ ಇದು ಆಗುತ್ತಿಲ್ಲವೇನೋ ಎನ್ನುವ ಭಾವನೆ ಮೂಡುತ್ತಿದೆ. ಅವರಿಗೆ ರಕ್ಷಣೆ ಸಿಗಬೇಕು. ಅವರಿಗೆ ಸರಿಯಾದ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಪ್ರಚಾರ ಸಿಗಬೇಕು. ಆ ರೀತಿ ಸಿಕ್ಕಿದ್ದೇಯಾದರೆ ಅದು ಸಕ್ಸೆಸ್ ಆಗುತ್ತದೆ. ಹುಬ್ಬಳ್ಳಿಯಲ್ಲಿ ಇವತ್ತು ನಾವು ಏನು ನೋಡುತ್ತಿದ್ದೇವೆ, ಅದೇನೊ ಕಾರ್ಯಗತವಾಗುತ್ತಿಲ್ಲ. ಇದಕ್ಕಿಂತ ಮುಖ್ಯವಾಗಿ ಸನ್ಮಾನ್ಯ ಸಹಕಾರ ಸಚಿವರು ಇವತ್ತು ಬಹಳಷ್ಟು ಹೆಮ್ಮೆಯಿಂದ ಯಶಸ್ವಿನಿ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಆದರೆ ಅದು ಏನಾಗುತ್ತಿದೆ ಎಂದರೆ, ತಾವು ಯಶಸ್ವಿನಿ ಬಗ್ಗೆ ಏನೇ ಹೇಳಿದರೂ ಕೂಡ, ಯಾವುದೇ ಆಸ್ಪತ್ರೆಗೆ ಹೋದಾಗ ಅಲ್ಲಿ ಅತೀ ಶೀಘ್ರವಾಗಿ ಅಪರೇಷನ್ ಮಾಡಿಸಬೇಕೆಂದು ಹೇಳಿದಾಗ, ಯಶಸ್ವಿನಿ ಇಲಾಖೆ ಆಫೀಸ್‌ನಿಂದ ಲೆಟರ್ ತನ್ನಿ ಎಂದು ಹೇಳುತ್ತಾರೆ. ಇವತ್ತೂಸಹ ನನಗೆ ಹಾವೇರಿ ತಾಲ್ಲೂಕಿನ ವ್ಯಕ್ತಿ ಬಂದು ನಾನು ಕಾರಿನಲ್ಲಿ ಬರಬೇಕಾದರೆ ಭೇಟಿಯಾಗಿ ಹೇಳಿದ, 'ನಾನು ಸೀರಿಯಸ್ ಇದೆ ಎಂದು ಹೇಳಿದರೂ ಕೂಡ ಇಲಾಖಾ ಅಧಿಕಾರಿಗಳು, ರಾಜಾಜಿನಗರದಲ್ಲಿ ಇರುವಂತಹ ನಿಮ್ಮ ಆಫೀಸ್‌ಗೆ ಹೋಗಿ ಅವರ ಕಡೆಯಿಂದ ಲೆಟರ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಆದರೆ ಅಲ್ಲಿ ಲೆಟರ್ ಕೇಳುವುದಕ್ಕೆ ಹೋದರೆ ಸೀರಿಯಸ್ ಎಂದು ಅವರ ಕಡೆಯಿಂದ ನೀವು ಬರೆಸಿಕೊಂಡು ಬಂದರೆ ನಾವು ಲೆಟರ್ ಕೊಡುತ್ತೇವೆಂದು ಹೇಳುತ್ತಾರೆ. ಎಂದು ಹೇಳಿದ. ಇದು ಯಾವ ನ್ಯಾಯ? ನನಗೆ ಅರ್ಥವಾಗುತ್ತಿಲ್ಲ. ಈ ಯಶಸ್ವಿನಿ ಯೋಜನೆ ಸಕ್ಸಸ್ ಆಗಬೇಕಾದರೆ ಇವತ್ತು ಬೆಳಿಗ್ಗೆ ಸಹ ನಾನು ನೋಡುತ್ತಿರಬೇಕಾದರೆ ಇಂತಹ ಉದಾಹರಣೆಗಳು ತಿಂಗಳಿನಲ್ಲಿ ನಾಲ್ಕಾರು ನಮ್ಮ ಗಮನಕ್ಕೆ ಬರುತ್ತಿದೆ. ಅದಕ್ಕೆ ನಮಗೆ ತಿಳಿದಿರುವ ಪ್ರಕಾರ ಯಶಸ್ವಿನಿ ಕಾರ್ಯಕ್ರಮವನ್ನು ಜರುಗಿಸಿದ್ದಕ್ಕೆ ಪೂರ್ಣ ಪ್ರಮಾಣದ ಹಣ ಪಾವತಿ ಆಗದೆಯಿರುವುದು ಎನ್ನುವ ಭಾವನೆ ಕಾಣುತ್ತಿದೆ. ಆ ರೀತಿ ಆಗದ ಹಾಗೆ ನೋಡಿಕೊಳ್ಳಬೇಕು. ಇಲ್ಲದೆ ಹೋದರೆ ಅವರಿಗೆ ಕ್ರೆಡಿಟ್ ಸಿಸ್ಟಂ ಇರಬೇಕು. ಇಂತಿಷ್ಟು ಮಾಡಿದರೆ ಇಂತಿಷ್ಟು ದಿನದಲ್ಲಿ ಕೊಡುತ್ತೇವೆ ಎನ್ನುವ ರೀತಿಯಲ್ಲಿ. ಅದು ಆಗದೇ ಇರುವ ಕಾರಣದಿಂದ ನಾರಾಯಣ ಹೃದಯಾಲಯದಲ್ಲಿ ಇಂತಹ ಪರಿಸ್ಥಿತಿ ಬಂತು ಎಂದರೆ, ಅವರು ಬಹಳಷ್ಟು ಆಸ್ಥೆ ವಹಿಸಿದವರು ಇದ್ದಾರೆ. ಈ ಯಶಸ್ವಿನಿ ಯಶಸ್ವಿಯಾಗಬೇಕು ಎನ್ನುವುದರ ಬಗ್ಗೆ ಡಾ:

ದೇವಿಶೆಟ್ಟಿಯವರು ಇಚ್ಛೆ ಪಟ್ಟವರು. ಅಲ್ಲಿ ಈ ಸಮಸ್ಯೆ ಉದ್ಭವವಾಗುತ್ತದೆ, ಅವರಿಗೆ ಏನು ಅನಾನುಕೂಲತೆಗಳು ಆಗಿರಬಹುದು ಎನ್ನುವುದನ್ನು ಗಂಭೀರವಾಗಿ ಚಿಂತನೆ ಮಾಡುತ್ತೀರಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಯಶಸ್ವಿನಿ ಬಗ್ಗೆ ನೀವು ಪ್ರಚಾರ ಮಾಡುವುದನ್ನು ನಿಲ್ಲಿಸಬೇಕು. ಇಲ್ಲದೆ ಇದ್ದರೆ ಸರಿಯಾದ ರೀತಿಯಲ್ಲಿ ನೀವು ಸರ್ಕಾರದ ಪೋರ್ಷನ್ ಹಣವನ್ನು ತುಂಬಬೇಕು. ಎರಡೂ ಆಗುವುದಿಲ್ಲ. ಇಲ್ಲಿ ಮಂತ್ರಕ್ಕಿಂತ ಉಗುಳು ಜಾಸ್ತಿಯಾಗಿಬಿಟ್ಟಿದೆ. 700 ರಿಂದ 750 ಜನ ಕ್ಯೂನಲ್ಲಿ ಇದ್ದಾರೆ. ಆದರೆ ಕೊಡುವುದಿಲ್ಲ. ಇವರು ಹೇಳಿದ ಹಾಗೆ ಅಲ್ಲಿ ಹೋಗಿ ಲೆಟರ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇಲ್ಲವೆಂದರೆ ಕೋ-ಆಪರೇಟಿವ್ ಸೆಕ್ರೆಟರಿಗಳ ಹತ್ತಿರ ನಾವ್ಯಾರಾದರೂ ಫೋನ್ ಮಾಡಬೇಕು. ಎಷ್ಟು ಜನ ಪ್ರಭಾವಿಗಳು ಬರುತ್ತಾರೆ? ಎಲ್ಲಾ ಸಾಮಾನ್ಯವಾಗಿ ಆರ್ಥಿಕ ದುಸ್ಥಿತಿಯಲ್ಲಿ ಇರುವವರು ಹಾಗೂ ಸಹಕಾರ ಸಂಘದ ಸದಸ್ಯರಿಗೆ ಯಶಸ್ವಿನಿ ಮಾಡುವಂತಾದ್ದು. ಅದೂ ಅಲ್ಲದೆ ನೀವು ಕೃಷಿ ಕಾರ್ಮಿಕರಿಗೆ ಮಾಡುತ್ತೇವೆಂದು ಹೇಳುತ್ತೀರಿ. ಸಹಕಾರ ಸಂಘದ ಮೆಂಬರ್‌ಗಳು ಆಗಿರುವಂತಹವರಿಗೆ ಯಶಸ್ವಿನಿ ಕಾರ್ಡ್ ಹೋಲ್ಡರ್‌ಗೆ ಇವತ್ತು ಚಿಕಿತ್ಸೆ ಸಿಗುತ್ತಿಲ್ಲ. ನಿಮ್ಮ ಆಫೀಸ್ ಕದ್ದುಮುಚ್ಚಿ ಬಾಗಿಲು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ಅದರ ಬಗ್ಗೆ ಕುಳಿತುಕೊಂಡು ಏನಾದರೂ ಸೆಟರ್ಲೈಟ್ ಮಾಡಬೇಕು. ಕಳೆದ ಅಧಿವೇಶನದಲ್ಲಿ ನೀವೇ ಹೇಳಿದ್ದೀರಿ. ಯಾರಿಗೆ ಟ್ರೀಟ್‌ಮೆಂಟ್ ಸಿಗುವುದಿಲ್ಲ, ಅದಕ್ಕೆ ನಾನು ಆಕ್ಷನ್ ತೆಗೆದುಕೊಳ್ಳುತ್ತೇನೆ ಎಂದು. ಯಾರಿಗೂ ಸಿಗುವುದಿಲ್ಲ, ಯಾರಿಗೆ ಸಿಗುತ್ತದೆ ಎಂದು ನೀವು ಹೇಳಬೇಕಾಗುತ್ತದೆ.

ಶ್ರೀ ಗೋವಿಂದ ಎಂ.ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಇನ್ನು ಯಶಸ್ವಿನಿ ಯೋಜನೆಯಲ್ಲಿ ಇವತ್ತು ನಮ್ಮ ಬಾಗಲಕೋಟೆ ಜಿಲ್ಲೆಯದು ಒಂದು ಉದಾಹರಣೆ ಹೇಳುತ್ತೇನೆ. 72,500 ಜನ ಸದಸ್ಯರಾಗಿದ್ದಾರೆ. ಒಟ್ಟು 78,56,000 ರೂ ಪ್ರೀಮಿಯಂ ಹಣ ಕಲೆಕ್ಟ್ ಆಗಿದೆ. ಇವತ್ತು ಒಬ್ಬರಿಗೂ ಕೂಡ ಪ್ರೀಮಿಯಂ ಪ್ರಕಾರ ಹಣ ಸಿಕ್ಕಿಲ್ಲ. ಅದೂ ಅಲ್ಲದೆ ಇವತ್ತು ಏನಾಗಿದೆ ಎಂದರೆ ಕೆಲವು ಆಸ್ಪತ್ರೆಯಲ್ಲಿ ಹೋಗಿ ಆಪರೇಷನ್ ಮಾಡಿಸಿಕೊಂಡಿದ್ದಾರೆ. ಆದರೆ ಆ ಆಸ್ಪತ್ರೆಗೆ ಹಣ ಬಂದಿಲ್ಲ. ಅಲ್ಲಿನ ಡಾಕ್ಟರ್ ಏನು ಮಾಡಿದ್ದಾರೆ ಎಂದರೆ ಪೇಷಂಟ್ ಯಾರ್ಯಾರು ಆಪರೇಷನ್ ಮಾಡಿಸಿಕೊಂಡಿದ್ದಾರೆ ಅವರ ಮನೆ ಮುಂದೆ ಆಳುಗಳನ್ನು ಕೂರಿಸಿದ್ದಾರೆ.

ಸರ್ಕಾರ ಇದನ್ನು ಮಾಡಬೇಕಾಗಿದ್ದರೆ, ಸರಿಯಾಗಿ ಮಾಡಬೇಕು, ಮಾಡದೆ ಹೋದರೆ ಇದನ್ನು ಕ್ಲೋಸ್ ಮಾಡಿಸಿ, ಅಡ್ಡಿ ಇಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದರು. ನಾನು, ಯಶಸ್ವಿನಿ ಕಾರ್ಡನ್ನು ಕ್ರೆಡಿಟ್ ಕಾರ್ಡ್ ರೀತಿಯಲ್ಲಿ ಮಾಡಿ ಎಂದು ಹೇಳಿದೆ. ಆದರೆ ಅದಕ್ಕೆ ಅವರು, ಯಾರು ಇದನ್ನು ಮಾಡುವುದಿಲ್ಲ, ಅಂತಹ ಆಸ್ಪತ್ರೆಗಳನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದರು. ನಾನು ಇನ್ನೊಂದು ಕೊಟ್ಟಿದ್ದೇನೆ. ಅದು ಶಕುಂತಲಾ ಡಾಟರ್ ಆಫ್ ಮಹಾಬಲ ಅವರದ್ದು ರಿಜೆಕ್ಟ್ ಮಾಡಿದ್ದಾರೆ. ಕಾರ್ಡ್ ಇದ್ದು ಆಸ್ಪತ್ರೆಯಿಂದ ನಿಮ್ಮ ಯಶಸ್ವಿನಿ ಹೆಲ್ತ್ ಸೆಂಟರ್‌ಗೆ ಹೋಗಿದೆ, ಅಂತಹದ್ದು ರಿಜೆಕ್ಟ್ ಮಾಡಿ ಕಳುಹಿಸಿದ್ದಾರೆ. ಹೀಗಾದರೆ ಏನು ಪ್ರಯೋಜನ?

ಶ್ರೀ ಗೋವಿಂದ ಎಂ.ಕಾರಜೋಳ: ಆಪರೇಷನ್ ಮಾಡುವುದಿಲ್ಲ. ಪತ್ರ ಕೊಟ್ಟು ಕಳುಹಿಸಿದರೆ ಅದಕ್ಕೆ ಉತ್ತರ ಕೂಡ ಕೊಡುವುದಿಲ್ಲ ಹಾಗೂ ಅದಕ್ಕೆ ಅಕನಾಲೆಡ್ಜ್‌ಮೆಂಟ್ ಕೊಡುವುದಿಲ್ಲ. ಅದನ್ನು ರಿಜೆಕ್ಟ್ ಮಾಡಿಕಳುಹಿಸುತ್ತಾರೆ. ಅದನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಸಿಸ್ಟಮ್ ಆವತ್ತಿನಿಂದ ಇವತ್ತಿನ ವರೆಗೂ ಏನೂ ಚೇಂಜ್ ಆಗಿಲ್ಲ. ಆಸ್ಪತ್ರೆಗೆ ಹೋಗಿ, ಯಶಸ್ವಿನಿಯಿಂದ ಕ್ಲಿಯರೆನ್ಸ್ ಸಿಗದೆ ಅವರು ಹೋಗುವ ಹಾಗಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ: ಬಡವರು ನಾಲ್ಕು ಸಾವಿರದಿಂದ ಆರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಆರುನೂರುರಿಂದ ಏಳುನೂರು ಕಿ.ಮೀ.ನಿಂದ ಬಂದು ವಾಪಸ್ಸು ಹೋಗುವುದು ಅಂದರೆ ಏನು ಗತಿ?

ಶ್ರೀ ಸಿ.ಎಂ.ಉದಾಸಿ: ಒಬ್ಬ ವ್ಯಕ್ತಿ ಮೂರು ಬಾರಿ ಹಾನಗಲ್‌ನಿಂದ ಬಂದು ಹೋದ, ನಾನೇ ಕಳುಹಿಸಿದ್ದೇ, ಅವನು ಮೂರು ಸಲ ಬಂದಾಗಲೂ ಆಪರೇಷನ್ ಆಗದೆ ಇರುವಂತಹ ಪರಿಸ್ಥಿತಿ ಬಂದರೆ ಏನು ಆಗಲಿಕ್ಕಿಲ್ಲ. ಮಾನ್ಯ 'ಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುತ್ತಾರೆಂದು ಹೇಳುತ್ತಾ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೆ.ಸಿ.ಸಿ.ಬ್ಯಾಂಕ್‌ನಲ್ಲಿ ರೈತರಿಗೆ ಏನೂ ಸಾಲ ಕೊಡುವಂತಹ ವ್ಯವಸ್ಥೆ ಇದೆ, ಸ್ಕೇಲ್ ಆಫ್ ಫೈನಾನ್ಸ್ ರಾಷ್ಟ್ರೀಕೃತ ಬ್ಯಾಂಕ್ ಏನಿದೆ, ಅದೇ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ನಮಗೆ ಕೊಡಬೇಕೆಂದು ಹೇಳಿದೆ. ಆದರೆ

ಇವತ್ತಿನವರೆಗೂ ಅದು ಸಾಧ್ಯವಾಗುತ್ತಿಲ್ಲ. ಕಳೆದ ವರ್ಷ ಎಲಿಜಿಬಿಲಿಟಿ ಇದ್ದು ಸಾಲ ತುಂಬಿದವರಿಗೆ ಸಾಲ ಕೊಟ್ಟಿಲ್ಲ. ಈ ವರ್ಷ ಕೂಡ ಎಲಿಜಿಬಿಲಿಟಿ ಇದ್ದು ಸಾಲ ತುಂಬಿದವರಿಗೆ ಸಾಲ ಕೊಟ್ಟಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತಂದೆ. ಆದರೆ ಇವತ್ತಿನವರೆಗೂ ಸಹ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಸಾಲ ಕೊಡುತ್ತಿಲ್ಲ. ಹೊಸಬರಿಗೆ ಕೂಡ ಸಾಲ ಕೊಡುತ್ತಿಲ್ಲ. ಇದಕ್ಕೆ ಸೆಪ್ಟೆಂಬರ್ 30 ರವರೆಗೆ ಅವಧಿ ಇರಬಹುದು. ಆದರೆ ಸಾಲ ಕೊಡುತ್ತಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತಂದು ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಉದಾಸಿಯವರು ಈಲ್ಡ್ ಆಗಿದ್ದಾರೆ. ಈ ಸ್ಕೇಲ್ ಆಫ್ ಫೈನಾನ್ಸ್ ಬಗ್ಗೆ ಬಿಡಿಸಿ ಹೇಳಬೇಕಾಗಿತ್ತು. ಮಾನ್ಯ ದೇಶಪಾಂಡೆಯವರೇ, ಇವತ್ತು ಸ್ಕೇಲ್ ಆಫ್ ಫೈನಾನ್ಸ್ ಡಬಲ್ ಮಾಡಿದ್ದೇವೆಂದು ಕೇಂದ್ರಸರ್ಕಾರ ತನ್ನ ಬಜೆಟ್‌ನಲ್ಲಿ ಹೇಳಿದೆ. ಆದರೆ....

ಶ್ರೀ ಆರ್.ವಿ.ದೇಶಪಾಂಡೆ: ಸ್ಕೇಲ್ ಆಫ್ ಫೈನಾನ್ಸ್ ಆಗಿಲ್ಲ. ಕ್ರೆಡಿಟ್ ಡಬಲ್ ಎಂದು ಹೇಳಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಕ್ರೆಡಿಟ್ ಡಬಲ್ ಆದರೆ ಸ್ಕೇಲ್ ಆಫ್ ಫೈನಾನ್ಸ್ ಡಬಲ್ ಆಗುವುದು, ಈ ಡಿ.ಸಿ.ಸಿ ಬ್ಯಾಂಕ್ ಹಾಗೂ ಲ್ಯಾಂಡ್ ಬ್ಯಾಂಕ್‌ನಲ್ಲಿ ಏನಾಗಿದೆ, ಸಹಕಾರ ಸಂಘದಲ್ಲಿ ಯಾರು ಸಾಲ ತೆಗೆದುಕೊಳ್ಳುತ್ತಾರೆ ಅವರಿಗೆ ಕೊಡುವುದು. ಅಥವಾ ಎರಡು ಅಥವಾ ಮೂರು ಪರ್ಸೆಂಟ್ ಜಾಸ್ತಿ ಕೊಡುವುದು. ಇನ್ನೊಂದು ಕಡೆ ಸಾಲಕ್ಕೆ ಮಿತಿ ಹಾಕಿ ಕೊಡುವುದು. ಅಲ್ಲಿ ಎಂಭತ್ತು ಸಾವಿರ ಅಥವಾ ಒಂದು ಲಕ್ಷಕ್ಕೆ ಒಬ್ಬ ಸದಸ್ಯ. ಅವನು ಎಷ್ಟೇ ಜಮೀನು ಇಟ್ಟುಕೊಂಡಿರಲಿ, ಅದನ್ನು ಇನ್‌ವೆಸ್ಟ್ ಮಾಡಿ ಅದನ್ನು ಮೀರಿ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಇಲ್ಲಿ ಭಾಷಣ ಆಗುತ್ತದೆ, ಆರು ಪರ್ಸೆಂಟ್‌ಗೆ ನಾವು ಸಾಲ ಕೊಡುತ್ತೇವೆಂದು. ಆದರೆ ವಾಸ್ತವವಾಗಿ ಮೂರು ಸಾಲ ತೆಗೆದುಕೊಂಡಿದ್ದಾರೆ. ಅವನಿಗೆ ಸಾಲ ಸಿಗುವುದು ಬಿಟ್ಟರೆ ಹೊಸ ಮೆಂಬರ್ ಇಂಡೆಕ್ಟ್ ಆಗುತ್ತಿಲ್ಲ. ಅಲ್ಲದೆ ಹಳೆಯ ಮೆಂಬರಿಗೂ ಕೂಡ ಸಾಲವನ್ನು ಜಾಸ್ತಿ ಸಾಲ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಆದುದರಿಂದ ಅದಕ್ಕೆ ಏನಾದರೂ ಮಾಡಿ ನೀವು ಡಿ.ಸಿ.ಸಿ. ಬ್ಯಾಂಕ್‌ಗೆ ಒಂದು ಸೂಚನೆ ಕೊಡಬೇಕು.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೆ, ಸ್ಕೇಲ್ ಆಫ್ ಫೈನಾನ್ಸ್ ಮಾಡುವಾಗ ಡಿ.ಸಿ.ಸಿ.ಬ್ಯಾಂಕ್‌ನವರು ಡಿಸ್ಟ್ರಿಕ್ಟ್ ಲೀಡ್ ಬ್ಯಾಂಕ್‌ನ ಮ್ಯಾನೇಜರ್‌ರವರನ್ನು ಕರೆದಿರುತ್ತಾರೆ. All other commercial bankers ಕರೆದಿರುತ್ತಾರೆ. ಅವರ ಜೊತೆ ಸಂಭಾಷಣೆ ಮಾಡಿ ಸ್ಕೇಲ್ ಆಫ್ ಫೈನಾನ್ಸ್ ಮಾಡುತ್ತೇವೆ. ಅದು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಸ್ಕೇಲ್ ಆಫ್ ಫೈನಾನ್ಸ್ ಆಗುತ್ತದೆ. ಅದು ಸ್ಟೇಟ್ ಲೆವೆಲ್‌ನಲ್ಲಿ ಆಗುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಫೈನಾನ್ಸ್ ಲಿಮಿಟ್ ಏನೂ ಸೊಸೈಟಿಯಲ್ಲಿ ಇಟ್ಟುಕೊಂಡಿದ್ದಾರೆ. ಒಂದು ಕುಟುಂಬಕ್ಕೆ ಎಂಭತ್ತು ಸಾವಿರ, ಒಂದು ಲಕ್ಷ, ಒಂದೂವರೆಲಕ್ಷ ಪ್ರತಿ ಎಕರೆಗೆ ಎಂದು, ಅದನ್ನು ಮೊದಲು ತೆಗೆಯಬೇಕು. ನನಗೆ ಜಮೀನು ಇದೆ. If I am eligible to draw why I am restricted to draw?

ಶ್ರೀ ಶಿವಾನಂದ ಪಾಟೀಲ್: ಅದನ್ನು ಫ್ಯಾಕ್ಸ್‌ನವರು ಕೊಡುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ನಮಗೆ ಅರ್ಹತೆ ಇರುವವರಿಗೆ ಏಕೆ ಕೊಡುವುದಿಲ್ಲ? ಈಗ ಎರಡುಲಕ್ಷ ರೂಪಾಯಿ ತೆಗೆದುಕೊಳ್ಳಬೇಕು ಎಂದರೆ ಕೊಡುವುದಿಲ್ಲ. ನನಗೆ ಒಂದೇ ಲಕ್ಷ ರೂಪಾಯಿ ಕೊಡುವುದು, ಅದರ ಮೇಲೆ ನನ್ನ ರೆಕಾರ್ಡ್ ಬಿಲ್ಡ್ ಅಪ್ ಮಾಡುವುದಿಲ್ಲ. ಅದನ್ನು ಸ್ವಲ್ಪ ತಾವು ನೋಡಬೇಕು.

ಶ್ರೀ ಶಿವಾನಂದ ಪಾಟೀಲ್: ಇಲ್ಲ, ಅದನ್ನು ಫ್ಯಾಕ್ಸ್‌ನವರು ಕೊಡುತ್ತಾರೆ. ಡಿ.ಸಿ.ಸಿ.ಬ್ಯಾಂಕ್‌ನವರು ಕೊಡುವುದಿಲ್ಲ. ಅದನ್ನು ಸೊಸೈಟಿಯವರು ನಿರ್ಧಾರ ಮಾಡಬೇಕು, ಎಷ್ಟು ಸಾಲ ಹಂಚಬೇಕು ಎನ್ನುವುದನ್ನು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಈ ಸದನಕ್ಕೆ ಭರವಸೆ ಕೊಡಬೇಕು, ಅದರ ಬಗ್ಗೆ ಯೋಚನೆ ಮಾಡಿ. ಇಡೀ ರಾಜ್ಯದಲ್ಲಿ ಇವತ್ತು ಸಹಕಾರ ಸಂಘದಲ್ಲಿ 6 ಪರ್ಸೆಂಟ್‌ಗೆ ಬಡ್ಡಿಯಂತೆ ಸಾಲ ಕೊಡುತ್ತೇವೆ ಎಂದು ಘೋಷಣೆ ಮಾಡಿದಮೇಲೆ, ಯಾರು ನ್ಯಾಷನಲೈಜ್ಡ್ ಬ್ಯಾಂಕಿಗೆ ಹೋಗುತ್ತಿದ್ದರು, ಅವರು ಕೋ-ಆಪರೇಟಿವ್ ಬ್ಯಾಂಕಿಗೆ ಬರುತ್ತಾರೆ. ಇದು ಒಂದು, ಯಾರು ಈ ಬಡ್ಡಿ ದುಬಾರಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಸಾಲವನ್ನು ತೆಗೆದುಕೊಳ್ಳುತ್ತಿಲ್ಲ, ನಿಮಗೆ ಗೊತ್ತು ಎಷ್ಟು ಪ್ರಮಾಣದಲ್ಲಿ ರೈತರು ಸಾಲ ತೆಗೆದುಕೊಳ್ಳುತ್ತಿದ್ದಾರೆ? ಅವರು ಮುಂದೆ ಬರುತ್ತಿರಲಿಲ್ಲ, ಈಗ ಅವನು 6

ಪರ್ಸೆಂಟ್‌ಗೆ ಸಾಲ ಸಿಗುವುದರಿಂದ ಸಹಕಾರ ಸಂಘದಲ್ಲಿ ಸಾಲ ಪಡೆದು, ಒಳ್ಳೆಯ ಬೆಳೆ ಬೆಳೆಯಬಹುದು, ನಾನು ಜಮೀನು ಡೆವಲಪ್ ಮಾಡಿಕೊಳ್ಳಬಹುದು ಎಂದು ಸಹಕಾರ ಸಂಘದಲ್ಲಿ ಮುಂದೆ ಕ್ಯೂ ನಿಂತಿದ್ದಾರೆ. ಆದರೆ ನೂರಕ್ಕೆ 99 ಕಡೆ ನಮಗೆ ಸಿಗುತ್ತಿರುವ ಉತ್ತರ ಹಳಬರಿಗೆ ಬಿಟ್ಟು ಬೇರೆಯವರಿಗೆ ಕೊಡುವುದಕ್ಕೆ ನಮ್ಮ ಹತ್ತಿರ ಹಣಕಾಸಿನ ಅನುಕೂಲತೆಗಳು ಇಲ್ಲ ಎನ್ನುವ ಸ್ಪಷ್ಟ ಉತ್ತರ ಬರುತ್ತಿದೆ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಡಿಟ್ರೈಲಾಗಿ ರಿಪ್ಲೇನಲ್ಲಿ ಹೇಳುತ್ತೇವೆ. ಈಗಾಗಲೇ ನಾನು ಹೇಳಿದ್ದೇನೆ, ಗೌವರ್ನ್‌ಮೆಂಟ್ ಆಫ್ ಇಂಡಿಯಾ ಸಹ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. 2007–08 ರ ವೇಳೆಗೆ ನಮ್ಮ ಗ್ರಾಮಾಂತರ ಪ್ರದೇಶಕ್ಕೆ ಹೋಗುವ ಕ್ರೆಡಿಟ್ ಇರಬಹುದು, ಅದು ಕೇವಲ ಅಗ್ರಿಕಲ್ಚರ್ ಅಲ್ಲ, ಆರ್ಟಿಸಾನ್ಸ್ ಇರಬಹುದು, ಆಗ್ರಿಕಲ್ಚರ್ ಇರಬಹುದು, ಹಾರ್ಟಿಕಲ್ಚರ್ ಇರಬಹುದು, ಸಿರಿಕಲ್ಚರ್ ಇರಬಹುದು, ಅಲೈಡ್ ಆಕ್ಟ್ಯಿವಿಟೀಸ್ ಇರಬಹುದು, ಅವು ಡಬಲ್ ಆಗಬೇಕು ಎಂದಿದೆ. ಹಾಗಾಗಿ ನಾವೂ ಸಹ 30 ಪರ್ಸೆಂಟ್ ಈ ಸಲ ಹೆಚ್ಚಿನ ಫೈನಾನ್ಸ್ ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಕೆಲವು ಸಮಸ್ಯೆಗಳಿಗೆ ಮಾನ್ಯ ಮಾಧುಸ್ವಾಮಿ ಹೇಳಿದ ಹಾಗೆ ಎಲಿಜಿಬಿಲಿಟಿ ಇದೆ. ನಬಾರ್ಡ್ ನಾರ್ಮ್ಸ್ ಇದೆ. ಆ ನಾರ್ಮ್ಸ್ ಪ್ರಕಾರ ಸಿಗಬೇಕು. ಇನ್ನು ಎರಡನೆಯದಾಗಿ coverage of farmers ಹೆಚ್ಚಾಗಬೇಕು. ಇದೆಲ್ಲಾ ಕೂಡ ನಾನು ಸಮಗ್ರವಾಗಿ ಉತ್ತರ ಕೊಡುವುದಾಗಿ ಡಿಟ್ರೈಲಾಗಿ ಹೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಆಡಿಟ್ ಮಾಡುವ ಸಲುವಾಗಿ ಒಂದು ಇಲಾಖೆ ಇದೆ. ಈ ಇಲಾಖೆಯವರು ಮಾಡಿದಂತಹ ಆಡಿಟ್‌ನ್ನು ಕೇಂದ್ರ ಸರ್ಕಾರದವರು ಒಪ್ಪಬೇಕು ಎಂದು ಏನಿಲ್ಲ. ಎಲ್ಲಾ ಸಹಕಾರ ಸಂಘಗಳು 2 ಲಕ್ಷಕ್ಕಿಂತ ಹೆಚ್ಚಿಗೆ ವ್ಯವಹಾರ ಮಾಡಿದವರು, ಅವರು ಬೇರೆ ಆಡಿಟ್ ಮಾಡಿಸಬೇಕು. ಸಹಕಾರ ಇಲಾಖೆಯವರಿಂದ ಆಡಿಟ್ ಮಾಡಿಸಬೇಕು, ಏಕೆಂದರೆ ಇನ್‌ಕಂಟ್ಯಾಕ್ಸ್ ಕೊಡುವುದಿದ್ದರೆ ನಿಮ್ಮದನ್ನು ಅಪ್ರೂವಲ್ ಮಾಡುವುದಿಲ್ಲ. ಅಲ್ಲದೆ ಒಂದು ನೂರು ರೂಪಾಯಿಗೆ 15 ಪೈಸೆ ಆಡಿಟ್ ಫೀ ಇದ್ದದ್ದು ಈಗ 20 ಪೈಸೆ ಮಾಡಿದ್ದೀರಿ. 20 ಪೈಸೆ ಫೀ ಮಾಡಿರುವುದರಿಂದ ಅನೇಕ ಸಂಘ ಸಂಸ್ಥೆಗಳು ಇದಕ್ಕೆ ಆಕ್ಷೇಪಣೆ ಬಂದಿದೆ. ಅದು ತಮ್ಮ ಗಮನಕ್ಕೆ ಬಂದಿರಬಹುದು. ಇವತ್ತು ಚಾಟರ್ಡ್ ಅಕೌಂಟ್‌ಂಟರ್‌ಗಳಿಗೆ ಏನು ಹಣವನ್ನು ಕೊಡುತ್ತಾರೆ, ಅದರ

ನಾಲ್ಕು ಪಟ್ಟು ಹಣವನ್ನು ನಿಮಗೆ ಕೊಡಬೇಕಾಗುತ್ತದೆ. ಇದಕ್ಕೆ ಈಗ 20 ಪೈಸೆ ಎಂದು ಏನು ಮಾಡಿದ್ದೀರಿ, ಇದರ ಪರಿಣಾಮ ಏನಾಯಿತೆಂದರೆ ಸಾರ್ವಜನಿಕರಿಂದ ಅನೇಕ ಆಕ್ಷೇಪಗಳು ಬಂದು, ಅನೇಕ ಸಂಘ ಸಂಸ್ಥೆಗಳು ನ್ಯಾಯಾಲಯಕ್ಕೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇಲ್ಲಿ ನ್ಯಾಯಾಲಯದಲ್ಲಿ ಏನಾಯಿತೆಂಬ ಬಗ್ಗೆಯೂ ತಮಗೆ ಹೇಳಲಿಚ್ಚಿಸುತ್ತೇನೆ. ತಾವು ಚಾರ್ಟರ್ಡ್ ಅಕೌಂಟೆಂಟರ್‌ಗಿಂತಲೂ ಹೆಚ್ಚಿಗೆ ನಾಲ್ಕು ಪಟ್ಟು ಹಣವನ್ನು ತೆಗೆದುಕೊಳ್ಳುವುದರಿಂದ, ನ್ಯಾಯಾಲಯದಲ್ಲಿ ತಾವು ಶುಲ್ಕವನ್ನು ವಸೂಲು ಮಾಡುತ್ತಿರುವಂಥದ್ದು ಮತ್ತು ಫೀ ಅನ್ನು ವಸೂಲು ಮಾಡುತ್ತಿರುವಂಥದ್ದು, ಏನು ಇದೆ, ಹಾಗೆ ವಸೂಲು ಮಾಡುತ್ತಿರುವಂತಹ ಹಣ, ಯಾವುದಕ್ಕೆ ಎಷ್ಟು ಖರ್ಚು ಬರುತ್ತದೆ, ಅದಕ್ಕಿಂತ ಹೆಚ್ಚಿಗೆ ಹಣವನ್ನು ವಸೂಲು ಮಾಡಬಾರದೆಂದು ಇದೆ. ಅದನ್ನು ಯಾವ ಉದ್ದೇಶಕ್ಕೆ ಮಾಡುತ್ತೀರೆಂಬ ಬಗ್ಗೆ ಜಸ್ಟಿಫಿಕೇಶನ್ ಮಾಡಬೇಕಾಗುತ್ತದೆ. ಆ ಜಸ್ಟಿಫಿಕೇಶನ್ ಮಾಡಬೇಕಾಗಿತ್ತೆಂಬ ಒಂದೇ ಒಂದು ಕಾರಣಕ್ಕಾಗಿ, ತಾವು ಒಂದೇ ಒಂದು ತಪ್ಪು ಮಾಹಿತಿಯನ್ನು ಕೊಟ್ಟಿರಿ. ಇದು 2004ನೇ ಇಸವಿಯಲ್ಲಿ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಾ ಇತ್ತು. ಈ ಕೇಸ್ ನಡೆಯುತ್ತಿರುವಂತಹ ಸಂದರ್ಭದಲ್ಲಿ ತಮ್ಮ ಆದಾಯ ಎಷ್ಟೆಂಬ ಬಗ್ಗೆ ಮಾಹಿತಿಯನ್ನು ಕೊಡಬೇಕಾದಂತಹ ಸಂದರ್ಭದಲ್ಲಿ 1992–93,94,95,96–1997ರ ಈ ಐದು ವರ್ಷಗಳ ಆದಾಯದ ಮಾಹಿತಿಯನ್ನು ತಾವು ಕೊಟ್ಟಿದ್ದೀರಿ. ಈ ಐದು ವರ್ಷದ ಆದಾಯದ ಮಿತಿಯನ್ನು ನೀವು ಕೊಟ್ಟಿರಲ್ಲಾ, ಇದರ ಪರಿಣಾಮ ಏನಾಯಿತೆಂದರೆ ಇದು ನ್ಯಾಯಾಲಯಕ್ಕೆ ಸಮಜಾಯಿಸಿ ಆಯಿತು. ಆದರೆ 1996–97ರ ಆದಾಯ ಮಿತಿಯನ್ನು ಏನು ಕೊಟ್ಟಿರಿ, ಇವತ್ತು ನ್ಯಾಯಾಲಯದಲ್ಲಿ ನಿಮ್ಮ ವಾದವನ್ನು ಎತ್ತಿ ಹಿಡಿದರು. ಇಲ್ಲಿ ಏನು ಖರ್ಚು ಬರುತ್ತದೆ, ಅಷ್ಟೇ ಆದಾಯವಿದೆಯೆಂದು ಹೇಳಿದ ಮಾತು ಒಪ್ಪಿಗೆಯಾಯಿತು. ಆದರೆ ನೀವು ತಪ್ಪು ಮಾಹಿತಿಯನ್ನು ಕೊಟ್ಟಿದ್ದೀರಿ. ನೀವು ಏನು ಕೊಡಬೇಕಾಗಿತ್ತು, 2001–2002, 2002–2003, 2003–2004ರ ಆದಾಯವನ್ನು ಕೊಡಬೇಕಾಗಿತ್ತು. ಆದರೆ ನೀವು 2003–2004ರ ಆದಾಯ ಏನು ಪರ್ಸೆಂಟೇಜ್‌ನ್ನು ಕೊಟ್ಟಿರಿ. ಇದಕ್ಕೂ, ಅದಕ್ಕೂ ಬಹಳಷ್ಟು ಅಜಗಜಾಂತರ ವ್ಯತ್ಯಾಸಗಳು ಇವೆ. ಇದರಲ್ಲಿ ಹೆಚ್ಚಿಗೆ ಆದಾಯವಿದೆ. ಈ ರೀತಿ ಇರುವಾಗ ಕೋರ್ಟಿಗೆ ತಪ್ಪು ಮಾಹಿತಿಯನ್ನು ಕೊಟ್ಟು ಸಹಕಾರಿ ಸಂಘಗಳನ್ನು ಕತ್ತಲೆಯಲ್ಲಿ ಇಟ್ಟು, ಇವತ್ತು ನೀವು

ನ್ಯಾಯಾಲಯದಲ್ಲಿ ಗೆದ್ದು ಬಂದ ಒಂದೇ ಒಂದು ಕಾರಣಕ್ಕಾಗಿ, ಇದನ್ನು ಇಂಟರ್‌ನೆಟ್‌ನಲ್ಲಿ ಹಾಕಿ ನಮಗೆ ಇಲ್ಲಿ ಹೇಳುತ್ತಾ ಇದ್ದೀರಿ. ಇದರ ಪರಿಣಾಮ ಏನಾಗಿದೆಯೆಂದರೆ ಒಂದು ಶೋಷಣೆಯಾಗುವಂಥಾದ್ದಕ್ಕೆ ದಾರಿಯಾಗುತ್ತದೆಂದು ಇದರ ಬಗ್ಗೆಯೂ ತಾವು ಗಮನಹರಿಸಬೇಕಾಗುತ್ತದೆ. ಇದನ್ನು ಬದಲಾವಣೆ ಮಾಡಬೇಕಾದಂತಹ ವಿಚಾರದ ಬಗ್ಗೆಯೂ ತಾವು ಚಿಂತನೆ ಮಾಡಬೇಕಾಗುತ್ತದೆ. ಇನ್ನು ಒಂದೆರಡು ಮಾತುಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇವೆ.

ಅಧ್ಯಕ್ಷರು: ಮಾನ್ಯ ಉದಾಸಿಯವರೇ ನಿಮ್ಮ ಇಡೀ ಪಕ್ಷದ ಸಮಯವನ್ನು ನೀವೇ ತೆಗೆದುಕೊಳ್ಳುವ ಹಾಗೆ ಕಾಣುತ್ತಿದೆ. ನಿಮಗೆ 1 ಗಂಟೆ 40 ನಿಮಿಷಗಳು ಮಾತ್ರ ಅಲಾಟ್ ಆಗಿರುವಂಥಾದ್ದು. ಈಗ ನೀವು 1 ಗಂಟೆ 10 ನಿಮಿಷಗಳನ್ನು ತೆಗೆದುಕೊಂಡಿದ್ದೀರಿ. ಇನ್ನು ನಿಮ್ಮವರಿಗೆ 30 ನಿಮಿಷಗಳ ಕಾಲಾವಕಾಶ ಇದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಇನ್ನು ಐದು ನಿಮಿಷಗಳಲ್ಲಿ ಮುಗಿಸುತ್ತೇನೆ. ಈಗ ರಾಜ್ಯದಲ್ಲಿ ಏನಾಗಿದೆಯೆಂದರೆ, ಹಾಸ್ಟೆಲ್‌ಗಳ ಸಂಖ್ಯೆ ಏನಾಗಿದೆಯೆಂದರೆ, ಈಗ ವಿದ್ಯಾರ್ಥಿಗಳ ಪ್ರಮಾಣಕ್ಕನುಸಾರವಾಗಿ ಶಾಲೆಗಳು ಇಲ್ಲ. ಈಗ ನನ್ನ ಕ್ಷೇತ್ರದಲ್ಲಿ 30,933ಜನ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು, 18,749 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಇದ್ದಾರೆ. ಸುಮಾರು ಐದೂವರೆ ಸಾವಿರ ವಿದ್ಯಾಥಿಗಳು ಇದ್ದಾರೆ, 490 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲವಾಗುವಂತಹ ಹಾಸ್ಟೆಲ್‌ಗಳು ಇವೆ. ಇದನ್ನು ಯಾವ ಪ್ರಮಾಣದಲ್ಲಿ ಮಾಡಿದ್ದೀರಿ, ಇದು ಶೇ.1 ಶೇ.2ರ ಪ್ರಮಾಣವೂ ಆಗುವುದಿಲ್ಲ. ವಿದ್ಯಾರ್ಥಿಗಳ ಪ್ರಮಾಣಕ್ಕೂ ಇವತ್ತು ಅಲ್ಲಿ ಪರಿಶಿಷ್ಠ ಜಾತಿಯವರಿಗೆ ಕೊಡುವಂತಹ ಅವಕಾಶ ಏನು? ಇವೆಲ್ಲಕ್ಕಿಂತಲೂ ಬಹಳಷ್ಟು ಗಂಭೀರವಾಗಿ ಚಿಂತನೆ ಮಾಡಬೇಕಾಗಿರುವಂಥಾದ್ದು, ಏನು ಎಂಬುದನ್ನು ಹೇಳುತ್ತೇನೆ. ಪ್ರತಿ ತಿಂಗಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 400 ರೂಪಾಯಿಗಳನ್ನು ಕೊಡುತ್ತಾರೆ. ಹಾಗೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 450 ರೂಪಾಯಿಗಳನ್ನು ಕೊಡುತ್ತಾರೆ. ಇವರಿಗೆ 400ರೂಪಾಯಿಗಳನ್ನು ಕೊಟ್ಟರೆ, ಅಂದರೆ ಪ್ರತಿಯೊಂದು ವಿದ್ಯಾರ್ಥಿಗಳಿಗೆ ಒಂದು ದಿವಸಕ್ಕೆ 11ರೂಪಾಯಿಗಳಾಗುತ್ತದೆ, 12.50 ರೂಪಾಯಿಗಳು ಆಗುತ್ತದೆ. ಇದರಲ್ಲಿ ಗ್ಯಾಸ್, ಟ್ರಾನ್ಸ್‌ಪೋರ್ಟೇಷನ್

ಎಲ್ಲಾ 1.50 ರೂ. ಹೋಗುತ್ತದೆ. ಇನ್ನು 11 ರೂ.ಗಳಲ್ಲಿ ಒಂದು ಟಿಫಿನ್ ಒಂದು ಊಟವನ್ನು ಕೊಡಲು ಸಾಧ್ಯವೇ? ಅದನ್ನು ತೂಕ ಮಾಡಿ ಆಹಾರ ಕೊಡುವಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುತ್ತೀರಾ, ಅಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಏನಾಗಿದೆಯೆಂದರೆ ಒಂದು ದಿವಸಕ್ಕೆ 15 ರೂ. ಗಳೆಂದರೆ, ಅವನು 13.20 ರೂಪಾಯಿಯನ್ನು ಬಳಸಬಹುದು. ಇವನು ಈ 13ರೂ. 20 ಪೈಸೆಯೆಂದರೆ ಆ ವಿದ್ಯಾರ್ಥಿ ಪ್ರೌಢನಾಗಿರುತ್ತಾನೆ, ಅವರಿಗೆ ಹೆಚ್ಚಿಗೆ ಆಹಾರ ಬೇಕಾಗುತ್ತದೆ. ಇಲ್ಲಿ ಇವನಿಗೆ ಈ 13ರೂ. 20 ಪೈಸೆಯಲ್ಲಿ ಎರಡು ಹೊತ್ತಿನ ಊಟವನ್ನು ಮತ್ತು ಆಹಾರವನ್ನು ಕೊಡಲು ಸಾಧ್ಯವೇ? ಇದನ್ನು ತಾವು ಆಲೋಚನೆಯನ್ನು ಮಾಡಬೇಕು. ಇದನ್ನು ತಿಂಗಳಿಗೆ 600 ರೂ. ಗಳು ಮತ್ತು 750ರೂ. ಗಳಿಗೆ ಹೆಚ್ಚು ಮಾಡಬೇಕೆಂದು ತಮಗೆ ತಿಳಿಸಲಿಚ್ಛಿಸುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ:- ಪ್ರಶ್ನೋತ್ತರ, ಗಮನಸೆಳೆಯುವ ಸೂಚನೆ, ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳುವ ಬಗ್ಗೆ.

ಶ್ರೀ ಎ.ಪಾಪರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ದಯಮಾಡಿ ಕೂಡಿ.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೀರೋ ಇಲ್ಲವೊ, ಎಂಬುದು ಗೊತ್ತಾಗಲಿಲ್ಲ. ಹಿಂದಿನ ಪ್ರಶ್ನೆಗಳಿಗೂ ನಮಗೆ ಉತ್ತರ ಸಿಗಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೇಡಿಕೆಯ ಮೇಲಿನ ಚರ್ಚೆಯನ್ನು ನಾಳೆ ಮುಂದುವರೆಸಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ, ಇದು ಒಂದು ದಿವಸವೂ ಬರದಿದ್ದರೆ ಹೇಗೆ?

ಅಧ್ಯಕ್ಷರು: ದಯಮಾಡಿ ಕೇಳಿ. ಈ ಬೇಡಿಕೆಗಳ ಮೇಲೆ 6ಗಂಟೆಯವರೆಗೂ ಚರ್ಚೆಯನ್ನು ಮಾಡಿ, 6ಗಂಟೆಯಿಂದ 7ಗಂಟೆಯವರೆಗೂ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಆ ರೀತಿ